# ಸಾಮಾಜಿಕ ಹೊರತಳ್ಳುವಿಕೆಯ ಪರಿಕಲ್ಪನೆ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ, ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಶರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲು ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ" ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಯಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ. ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ

ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಈ ಕೃತಿಯನ್ನು ರಚಿಸಿದ ಗುರುಲಿಂಗಯ್ಯ ಎಂ. ಅವರಿಗೆ ಅಭಿನಂದನೆಗಳು. ಗುರುಲಿಂಗಯ್ಯ ಅವರು ಈ ಹಾದಿಯಲ್ಲಿ ಹೆಚ್ಚಿನ ಕೆಲಸ ಮಾಡಲೆಂದು ಹಾರೈಸುತ್ತೇನೆ. ಈ ಕೃತಿಯನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀ.ಬಿ. ಸುಜ್ಞಾನಮೂರ್ತಿ ಅವರಿಗೆ ಅಭಿನಂದನೆಗಳು.

**ಡಾ.ಎ. ಮುರಿಗೆಪ್ಪ**
ಕುಲಪತಿಗಳು

(1)

ಸಾಮಾಜಿಕ ಹೊರತಳ್ಳುವಿಕೆ ಎನ್ನುವ ಪದದ ಬಳಕೆ ಇತ್ತೀಚಿನದು. ಈ ಪದವನ್ನು ಮೊದಲು ಫ್ರಾನ್ಸಿನಲ್ಲಿ ಬಳಸಲಾಯಿತು. ಇದು ಒಂದು ಪ್ರಕ್ರಿಯೆಯಾಗಿದ್ದು, ಭಾಗವಹಿಸುವಿಕೆ, ದೊರಕುವಿಕೆ ಮತ್ತು ಐಕ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ. ಸಮಾಜದ ಮಟ್ಟಿಗೆ ಹೇಳುವುದಾದರೆ, ಸಮಾಜದ ಸಮಗ್ರತೆಯ ಮೇಲೆ ನೇತ್ಯಾತ್ಮಕವಾಗಿ ಪರಿಣಾಮ ಬೀರುತ್ತದೆ. ವ್ಯಕ್ತಿಗಳ ಮಟ್ಟದಲ್ಲೂ ಇದು ಸಾಮಾಜಿಕ ಸಂಬಂಧಗಳನ್ನು ಕಟ್ಟುವಲ್ಲಿ ಮತ್ತು ನಿರೀಕ್ಷಿತ ಸಾಮಾಜಿಕ ಚಟುವಟಿಕೆಗಳಲ್ಲಿ ಸ್ವಾಭಾವಿಕವಾಗಿ ಭಾಗವಹಿಸಲು ಅಸಮರ್ಥತೆಯನ್ನು ನಿರ್ಮಾಣ ಮಾಡುತ್ತದೆ.

ಉತ್ತರ ಐರ್ಲೆಂಡ್‌ನಲ್ಲಿ ಈ ಕೆಳಗಿನ ರೀತಿಯಲ್ಲಿ ಸಾಮಾಜಿಕ ಹೊರತಳ್ಳುವಿಕೆಯನ್ನು ವ್ಯಾಖ್ಯಾನಿಸಲಾಗಿದೆ. “Social exculsion is a set of process, including within the labour market and the welfare system, by which individuals, house-holds, communicates or even whole social groups are pushed towards or kept to the margins of society. it incompressess not only matarial replexation but also more broadly the denia of opportunities to partticipate fully in social and civil life”.

ಇದರ ಅರ್ಥವೇನೆಂದರೆ ಸಾಮಾಜಿಕ ಹೊರತಳ್ಳುವಿಕೆ ಎನ್ನುವುದು ಒಂದು ಪ್ರಕ್ರಿಯೆಯಾಗಿದ್ದು, ಕಾರ್ಮಿಕರ ಮಾರುಕಟ್ಟೆ ಮತ್ತು ಕಲ್ಯಾಣ ವ್ಯವಸ್ಥೆಯನ್ನು ಒಳಗೊಂಡಂತೆ ವ್ಯಕ್ತಿಗಳು, ಕುಟುಂಬಗಳು, ಭೌತಿಕ ವಂಚಿತರನ್ನು ಒಳಗೊಳ್ಳದೆ ಬಹು ಮುಖ್ಯವಾಗಿ ಸಮಾಜ ನಾಗರೀಕ ಜೀವನದ ಎಲ್ಲಾ ಅವಕಾಶಗಳನ್ನು ನಿರಾಕರಿಸುವುದೇ ಸಾಮಾಜಿಕ ಹೊರತಳ್ಳುವಿಕೆ ಎನ್ನಬಹುದು.

ಫ್ರಾನ್ಸಿನ ರೇನ್ ಲೀನಿಯರ್ ರವರು ಯಾವ ಯಾವ ಗುಂಪುಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿವೆ. ಎಂಬುದನ್ನು ಹೇಳಿದ್ದಾರೆ. ಅವರುಗಳೆಂದರೆ, ಮಾನಸಿಕವಾಗಿ ಮತ್ತು ದೈಹಿಕವಾಗಿ ವಿಕಲಚೇತನರು, ಆತ್ಮಹತ್ಯೆಯ ಗುಂಪು, ವಯೋವೃದ್ಧರು, ಮನೆಬಿಟ್ಟ ಮಕ್ಕಳು, ಮದ್ಯವ್ಯಸನಿಗಳು, ಬಾಲಾಪರಾಧಿಗಳು, ಏಕಪೋಷಕರು, ಬಹುಸಮಸ್ಯೆಗಳ ಕುಟುಂಬಗಳು, ಅಂಚಿನಗುಂಪುಗಳು, ಸಾಮಾಜಿಕ ಗುಂಪುಗಳು. ಹೀಗೆ ಸಾಮಾಜಿಕ ಹೊರತಳ್ಳುವಿಕೆಯು ವಿವಿಧ ನಮೂನೆಯಲ್ಲಿ ವಿವಿಧ ಆಯಾಮದಲ್ಲಿ ಅರ್ಥೈಸಲಾಗಿದೆ.

ಸಾಮಾಜಿಕ ಹೊರತಳ್ಳುವಿಕೆಯ ಸಂದರ್ಭವು ಹಲವು ರೀತಿಯಲ್ಲಿ ನಡೆಯುವುದನ್ನು ನಾವು ನೋಡಬಹುದಾಗಿದೆ. ಸಮಾಜವು ಪರಿವರ್ತನಾಶೀಲವಾದದ್ದು. ಸಾಮಾಜಿಕ ಸಂಬಂಧಗಳಲ್ಲಿ ಜನರ ಅಂತಸ್ತು-ಪಾತ್ರಗಳಲ್ಲಿ ಸಾಮಾಜಿಕ ನಿಯಂತ್ರಣದ ಸಾಧನಗಳಲ್ಲಿ ಬದಲಾವಣೆಗಳು ನಿರಂತರವಾಗಿ ಸಂಭವಿಸುತ್ತಲೇ ಇರುತ್ತವೆ. ಎಲ್ಲಿಯವರೆಗೆ ಇಂತಹ ಪರಿವರ್ತನೆಗಳೊಂದಿಗೆ ಜನರು ಗೊಂದಲಕ್ಕೆ ಒಳಗಾಗದೇ ಹೊಂದಿಕೊಂಡು ತಮ್ಮ ದೈನಂದಿನ ಜೀವನವನ್ನು ನಡೆಸಿಕೊಂಡು ಹೋಗುವರೋ, ಅಲ್ಲಿಯವರೆಗೆ ಅವು ಸಾಮಾಜಿಕ

ಹೊರತಳ್ಳುವಿಕೆಗೆ ಒಳಗಾಗುವುದಿಲ್ಲ. ಆದರೆ, ಈ ತೆರನಾದ ಪರಿವರ್ತನೆಗಳಿಂದ ಜನರು ಸಾಮಾಜಿಕ ಜೀವನವನ್ನು ನಡೆಸಲು ಅಸಮರ್ಥರಾದರೆ ಆಗ ಸಮಾಜದ ಹೊರತಳ್ಳುವಿಕೆಗೆ ಒಳಗಾಗಬಹುದು.

ವ್ಯಕ್ತಿ ವ್ಯಕ್ತಿಗತ ಜೀವನಕ್ಕೆ ಆದರ್ಶವಿರುವಂತೆ ಆತನ ಸಾಮಾಜಿಕ ಜೀವನಕ್ಕೂ ಆದರ್ಶಗಳಿವೆ. ವ್ಯಕ್ತಿಗತ ಸುಖಸಮೃದ್ಧಿ ಮಾತ್ರವಲ್ಲದೇ ತನ್ನ ಸಾಮಾಜಿಕ ಬದ್ಧತೆಗಳ ಹಾಗೂ ಹೊಣೆಗಾರಿಕೆಗಳ ಬಗ್ಗೆಯೂ ಪೂರ್ಣ ಅರಿವಿರಬೇಕೆಂಬ ಪ್ರಜ್ಞೆ ಅಥವಾ ತಿಳುವಳಿಕೆ ವ್ಯಕ್ತಿಗಳಲ್ಲಿ ಸದಾ ಜಾಗೃತವಿದ್ದಾಗ ಸಾಮಾಜಿಕ ಜೀವನ ಸದೃಢವಾಗಿರುತ್ತದೆ. ಆದರೆ, ಇಂತಹ ಆದರ್ಶದ ಬಗ್ಗೆ ವಿಮುಖವಾಗಿ ವ್ಯಕ್ತಿ ಸಾಮಾಜಿಕ ಹೊಣೆಗಾರಿಕೆಗಳನ್ನು ನಿಭಾಯಿಸಲು ಅಸಮರ್ಥನಾದಾಗ ಅಂತಹ ವ್ಯಕ್ತಿ ಸಾಮಾಜಿಕ ವ್ಯವಸ್ಥೆಯಿಂದ ದೂರ ಸರಿದು ಸಮೂಹದ/ಸಮಾಜದ ನಿರಾಕರಣೆಗೆ ಒಳಗಾಗುತ್ತಾನೆ.

ಸಾಮಾಜಿಕ ನಿರಾಕರಣೆಯೆಂಬುದು ಸಮಾಜದಲ್ಲಿ ವ್ಯಕ್ತಿಯು ಹೊಂದಿರುವ ಆದಾಯ ಮತ್ತು ಸಮಾಜದಲ್ಲಿ ನಿರ್ವಹಿಸುವ ಕಾರ್ಯದ ಮೇಲೆ ನಿರ್ಧರಿತವಾಗುತ್ತದೆ. ಸಮಾಜದಲ್ಲಿ ಬಹುತೇಕವಾಗಿ ಕಡಿಮೆ ತಲಾದಾಯ ಅಥವಾ ಬಡತನ ರೇಖೆಗಿಂತ ಕೆಳಗಿನ ಸಮೂಹದ ವ್ಯಕ್ತಿಗಳು ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾರೆ. ಇಂದಿನ ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಇಂತಹ ವ್ಯಕ್ತಿಗಳು ತಮ್ಮ ಸಾಮಾಜಿಕ ಜೀವನವನ್ನು ಹೇಗೆ ನಿರ್ವಹಿಸುತ್ತಾರೆ ಹಾಗೂ ಸಾಮಾಜಿಕ ಕಾರ್ಯಗಳನ್ನು (ಅಂದರೆ ರಾಜಕೀಯ, ಸಾಮಾಜಿ, ಆರ್ಥಿಕ) ಹೇಗೆ ನಿರ್ವಹಿಸುತ್ತಾರೆ ಎಂಬುದರ ಮೇಲೆ ಸಾಮಾಜಿಕ ನಿರಾಕರಣೆಯು ನಿರ್ಧರಿತವಾಗುತ್ತದೆ.

ಸಮಾಜವು ಕಾರ್ಯಾತ್ಮಕವಾದದ್ದು ಮತ್ತು ಸಮೂಹಗಳಿಂದ ಕೂಡಿದ್ದು. ಇಂತಹ ಸಮೂಹವು ಕೆಲವೊಂದು ನಿರೀಕ್ಷೆಗಳನ್ನು/ಧ್ಯೇಯಗಳನ್ನು ಹೊಂದಿರುತ್ತದೆ. ಮತ್ತು ಕೆಲವೊಂದು ನೀತಿ ನಿಯಮಗಳನ್ನು ಪಾಲಿಸಬೇಕೆಂತಲೂ ಸಮೂಹವು ನಿರೀಕ್ಷಿಸುತ್ತದೆ. ಆದರೆ, ವ್ಯಕ್ತಿಯ ಸಮೂಹ ಸಮಾಜದ ಧ್ಯೇಯೋದ್ದೇಶಗಳಿಗೆ ವ್ಯವಸ್ಥಿತ ರೀತಿಯಲ್ಲಿ ವರ್ತಿಸದಿದ್ದಾಗ ಅವನು ಸಮಾಜದ/ಸಮೂಹದ ನಿರಾಕರಣೆಗೆ ಒಳಗಾಗುತ್ತಾನೆ.

ಸಮಾಜಗಳು, ಸಮುದಾಯಗಳು ಮತ್ತು ವ್ಯಕ್ತಿಗಳಿಂದ ರಚಿತವಾಗಿರುತ್ತವೆ. ಸಮಾಜವು ಪರಿವರ್ತನಾಶೀಲವಾದದ್ದು. ಸಮಾಜ ಬದಲಾದಂತೆ ವ್ಯಕ್ತಿಗಳು ನೂತನ ಪಾತ್ರಗಳನ್ನು ನಿರ್ವಹಿಸಬೇಕಾಗುವುದು. ಕಾರ್ಯಾತ್ಮಕದ ಮುಖಾಂತರ ಸಮಾಜದ ಧ್ಯೇಯೋದ್ದೇಶಗಳಿಗನುಗುಣವಾಗಿ ವ್ಯಕ್ತಿ ತನ್ನ ಗುರಿಯನ್ನು ತಲುಪಲು ವಿಫಲವಾದಾಗ ಆ ವ್ಯಕ್ತಿ ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾನೆ.

ಸಾಮಾಜಿಕ ನಿರಾಕರಣೆಯೆಂಬುದು ಬಡತನ, ಆದಾಯ, ಅಸಮಾನತೆ ಬಹಿಷ್ಕಾರ. ಉದ್ಯೋಗದ ಅಭಾವ ಹೀಗೆ ಮುಂತಾದ ಅಂಶಗಳ ಮೇಲೆ ನಿರ್ಧರಿತವಾಗುತ್ತದೆ ಹಾಗೂ ಸಾಮಾಜಿಕ ನಿರಾಕರಣೆಗೆ ಒಳಗಾದ ವ್ಯಕ್ತಿಯ ಸಮೂಹದಿಂದ ಬಹಿಷ್ಕರಿಸಿ ಕುಟುಂಬ ಹಾಗೂ ಸಾಮಾಜಿಕ ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ. ಅಲ್ಲದೇ ಸಾಮಾಜಿಕ ಜೀವನದಿಂದ ದೂರ ಸರಿದು ನೈತಿಕ ಅವನತಿ ಹೊಂದುತ್ತಾನೆ.

ಬದಲಾಗುತ್ತಿರುವ ಸಮಾಜದಲ್ಲಿ ವ್ಯಕ್ತಿಯ ಸಮಾಜದ ಹಿತಾಸಕ್ತಿ ಮತ್ತು ನಿಯಮಗಳಿಗನುಸಾರವಾಗಿ ಸಾಮಾಜಿಕ ಜೀವನವನ್ನು ನಿರ್ವಹಿಸದರೆ ಅಂತಹ ವ್ಯಕ್ತಿಯು ಸಾಮಾಜಿಕ ವ್ಯಕ್ತಿಯಾಗಿ ರೂಪಗೊಳ್ಳುತ್ತಾನೆ. ಆದರೆ, ಇಂತಹ ಅಂಶಗಳಲ್ಲಿ ವ್ಯತ್ಯಾಸ ಉಂಟಾದರೆ ಸಮಾಜವು ವ್ಯಾಪ್ತಿಯಿಂದ ಹೊರದೂಡಲ್ಪಟ್ಟು, ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾನೆ.

**ಸಾಮಾಜಿಕ ನಿರಾಕರಣೆಯ ಮನೋ–ಸಾಮಾಜಿಕ ಪರಿಣಾಮಗಳು**

ಸಾಮಾಜಿಕ ಹೊರತಳ್ಳುವಿಕೆ ಎಂಬ ಅಂಶವು ಚಿಕ್ಕದಾದರೂ, ಇದರಿಂದ ಸಮಾಜ ಹಾಗೂ ಸಮುದಾಯದಲ್ಲಿ ವಾಸಿಸುವ ವ್ಯಕ್ತಿಗಳ ಮನಸ್ಸಿನ ಮೇಲಾಗುವಂತಹ ಪರಿಣಾಮಗಳು ಅಗಾಧವಾದದ್ದು. ಹೊರತಳ್ಳುವಿಕೆಯು ಸಾಮಾಜಿಕ ಅಸಮತೋಲನವನ್ನು ಸಂಕೇತಿಸುವುದರಿಂದ ಇದು ಸಾಮಾಜಿಕ ವ್ಯವಸ್ಥೆಯ ಮೇಲೆ ಬೀರುವ ದುಷ್ಪರಿಣಾಮ ಅಪಾರವಾದದ್ದು. ಸಮಾಜದ ವಿಶಾಲ ವ್ಯಾಪ್ತಿಯಲ್ಲಿ

ಜೀವಿಸುವ ಜನರು/ವ್ಯಕ್ತಿಗಳು ತಾವು ವಾಸಿಸುವ ಪರಿಸರದಲ್ಲಿ ಹೊರತಳ್ಳುವಿಕೆಗೆ ಒಳಗಾಗುತ್ತಾರೆ. ಅಂತಹ ವ್ಯಕ್ತಿಗಳು ವೈಯಕ್ತಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಜೊತೆಗೆ ಇದರ ಪರಿಣಾಮ ಅವರ ವಾಸಿಸುವ ಸಮಾಜ ಹಾಗೂ ಸಮುದಾಯದ ಮೇಲೂ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಹೊರತಳ್ಳುವಿಕೆಯ ಕೇವಲ ಯಾವುದೇ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ವಿಷಯವಲ್ಲ. ಬದಲಾಗಿ ಇಡೀ ಮಾನವ ಸಮಾಜಕ್ಕೆ ಸಂಬಂಧಿಸಿದ್ದಾಗಿದ್ದು, ಕ್ರಮೇಣ ಇದಕ್ಕೆ ಒಳಗಾದವರ ಸಂಖ್ಯೆ ಹೆಚ್ಚಿದಂತೆಲ್ಲಾ ಹೊರತಳ್ಳುವಿಕೆಯು ಒಂದು ಸಾಮಾಜಿಕ ಸಮಸ್ಯೆಯಾಗಿ ರೂಪಗೊಳ್ಳುತ್ತದೆ. ಹೊರತಳುವಿಕೆಯು ವ್ಯಕ್ತಿಗಳ ಮನೋ, ಬೌದ್ಧಿಕತೆಯ ಮೇಲೆ ಹಾಗೂ ಸಾಮಾಜಿಕವಾಗಿ ಹಲವಾರು ದುಷ್ಪರಿಣಾಮಗಳನ್ನು ಬೀರುವಂತದ್ದಾಗಿದ್ದು, ಅವು ಕೆಳಕಂಡಂತಿವೆ.

ಮಾನಸಿಕ ತೊಂದರೆಗಳು (Psychological Problems), ಸಾಮಾಜಿಕ ಸಂಬಂಧಗಳ ಮೇಲೆ ಪರಿಣಾಮ (Relational Problems), ವ್ಯಕ್ತಿತ್ವದ ಅವನತಿ/ನಾಶ (Loss of Identity), ಸಾಂಸ್ಕೃತಿ ಮೌಲ್ಯಗಳ ಅವನತಿ/ನಾಶ (Loss of Cultural Affiliations), ವೃತ್ತಿ ಸಂಬಂಧಗಳ ಸಡಿಲಿಕೆ (de-integration from work relations), ವೃತ್ತಿ ಸಂಬಂಧಗಳ ಸಡಿಲಿಕೆ (de-intergration from work relations).ಬೌದ್ಧಿಕ ಖಿನ್ನತೆಯ ಸಮಸ್ಯೆಗಳು (Problems of Mental depression), ವೈಯಕ್ತಿಕ ವಿಘಟನೆ (internal de-structuring of the person), ಕಾರ್ಯ/ಉದ್ದೇಶದ ವಿಫಲತೆ (Loss of Purpose), ಕೌಟುಂಬಿಕ ಸಂಬಂಧಗಳಲ್ಲಿ ಸಡಿಲಿಕೆ (de-integration from family ties), ವಿಷಯ ಕುರಿತಾದ ತೊಡರಿಸುವ ಪ್ರಕ್ರಿಯೆ (Process of subjective implication), ಬಡತನದ ತೀವ್ರತೆ (The innerdimension of poverty), ಸಾಮಾಜಿಕ, ಕೌಟುಂಬಿಕ ಸಂಬಂಧಗಳಲ್ಲಿ ಸಡಿಲಿಕೆ (de-integration from social relations).

ಸಮಾಜದಲ್ಲಿ ಹೊರತಳ್ಳುವಿಕೆಗೆ ಒಳಗಾದಂತಹ ವ್ಯಕ್ತಿಗಳು ಬಹುಮುಖ್ಯವಾಗಿ ಎದುರಿಸುವಂತಹ ಸಮಸ್ಯೆಗಳೆಂದರೆ,

ಸಂಬಂಧಗಳ ಸಮಸ್ಯೆ (Relationa Problems), ವ್ಯಕ್ತಿತ್ವದ ಅವನತಿ (Loss of Identity), ಬೌದ್ಧಿಕ/ಮಾನಸಿಕ ಖಿನ್ನತೆ (Mental Depression).

ಮೇಲಿನ ಅಂಶಗಳನ್ನು ಕೂಲಂಕುಶವಾಗಿ ಗಮನಿಸಿದಾಗ ಹೊರತಳ್ಳುವಿಕೆಯು ಒಂದು ಮನೋ-ಸಾಮಾಜಿಕ ಸಮಸ್ಯೆಯಾಗಿದ್ದು, ಇದು ವ್ಯಕ್ತಿ ಹಾಗೂ ಸಮಾಜದ ಮೇಲೆ ಹಲವಾರು ದುಷ್ಪರಿಣಾಮಗಳನ್ನು ಬೀರುವಂತಹ ವಿದ್ಯುನ್ಮಾನವಾಗಿದೆ. ಈ ಹಿನ್ನೆಲೆಯಲ್ಲಿ ಜನರನ್ನು ಇಂತಹ ಸಮಸ್ಯೆಗಳೆಂದರೆ ತಪ್ಪಿಸಿ, ವೈಯುಕ್ತಿಕ ಅವನತಿಯಿಂದ ರಕ್ಷಿಸಿ ಸಮಾಜದಲ್ಲಿ ಆರೋಗ್ಯಪೂರ್ಣವಾದ ವಾತಾವರಣವನ್ನು ನಿರ್ಮಿಸಬೇಕಾದರೆ ಹೊರತಳ್ಳುವಿಕೆಯಿಂದಾಗುವ ಸಮಸ್ಯೆ/ದುಷ್ಪರಿಣಾಮಗಳಿಗೆ ಸಲಹೆ ಮತ್ತು ಪರಿಹಾಋವನ್ನು ಸೂಚಿಸುವ ಅನಿವಾರ್ಯತೆ ನಮ್ಮೆದುರಿಗಿದೆ.

**ಹೊರತಳ್ಳುವಿಕೆಯ ರಚನೆ/ಉಗಮಕ್ಕೆ ಕಾರಣಗಳು**

ಸಮಾಜ ವಿಜ್ಞಾನಿಗಳು ಈಗಾಗಲೇ ನಡೆಸಿರುವಂತಹ ಹಲವಾರು ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ, ಸಾಮಾಜಿಕ ಜೀವಿಯಾದ ವ್ಯಕ್ತಿ ಹೊರತಳ್ಳುವಿಕೆಗೆ ಒಳಗಾಗಲು ಕಾರಣಗಳೇನು ಎಂಬುದನ್ನು ತಿಳಿಯುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ, ಇದರ ಉಗಮಕ್ಕೆ ನಿಖರವಾದ ಕಾರಣವನ್ನು ತಿಳಿಯಲು ಇಂದಿಗೂ ಸಾಧ್ಯವಾಗಿಲ್ಲ. ಏಕೆಂದರೆ ಹೊರತಳ್ಳುವಿಕೆ ಎಂಬ ಪರಿಕಲ್ಪನೆಯು ಬಹು ವಿಸ್ತೃತವಾದದ್ದು. ವ್ಯಕ್ತಿಗಳು ಇಂತಹ ಅಂಶಗಳಿಂದಲೇ ಹೊರತಳ್ಳುವಿಕೆಗೆ ಒಳಗಾಗುತ್ತಾರೆ ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ಸಾಮಾಜಿಕ ವಿದ್ಯಮಾನವಾದರೂ ಸಹ ಹಲವಾರು ಅಂಶಗಳ ಪ್ರಭಾವದಿಂದ/ಕಾರಣಗಳಿಂದಲೇ ಉಂಟಾಗುತ್ತದೆ.

ಹೊರತಳ್ಳುವಿಕೆಯನ್ನು ಒಂದು ಸಮಾಜದ ಭಾಗವಾಗಿ ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಿಸುವುದಾದರೆ ಅದರ ಹಿನ್ನೆಲೆಯಲ್ಲಿ ಹಲವಾರು ಅಂಶಗಳ ಪ್ರಭಾವವಿರುವುದು ನಮ್ಮ ಗಮನಕ್ಕೆ ಬರುತ್ತದೆ. ಸಾಮಾಜಿಕ ಹೊರತಳ್ಳುವಿಕೆ ಎಂಬುದು ಸಾಮಾಜಿಕ ಒಳಗೊಳ್ಳುವಿಕೆಯ ವಿರುದ್ಧವಾದ ಸ್ಥಿತಿ. ಈ ಪ್ರಕ್ರಿಯೆಗೆ ಒಳಗಾದ ವ್ಯಕ್ತಿಗಳು ಹಲವಾರು ಗಂಭೀರವಾದ ಸಮಸ್ಯೆಗಳ ಸುಳಿಗೆ ಸಿಲುಕಿ

ನೈತಿಕ ಅವನತಿ ಹೊಂದುತ್ತಾರೆ ಎನ್ನಬಹುದು. ಸಾಮಾಜಿಕ ಹೊರತಳ್ಳುವಿಕೆಗೆ ವ್ಯಕ್ತಿಯ ಕೇವಲ ತಿರಸ್ಕೃತ ಅಂಶಗಳೇ ಕಾರಣವಲ್ಲ ಬದಲಾಗಿ ಪ್ರೇರಿತ ಅಂಶಗಳು ಸಹ ಕಾರಣವಾಗುತ್ತವೆ.

ಸಮಾಜದಲ್ಲಿ ವ್ಯಕ್ತಿಗಳು ಹೊರತಳ್ಳುವಿಕೆಗೆ ಒಳಗಾಗಲು ಉದ್ಯೋಗ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಇವೆರಡೂ ಒಂದಕ್ಕೊಂದು ಪೂರಕವಾದ ಸಂಬಂಧವನ್ನು ಹೊಂದಿವೆ. ಅವುಗಳೆಂದರೆ,

ಬಾಲ ಕಾರ್ಮಿಕರು(Child Labourers), ನಿರುದ್ಯೋಗಿ ಯುವಜನತೆ (Unqualified Youngest), ಕಡಿಮೆ ವೇತನ ಪಡೆಯುವವರು (The low Paid), ರಕ್ಷಣೆ ರಹಿತ ಕೆಲಸಗಾರರು (Unprotected Workers), ವೃದ್ಧ ಕೆಲಸಗಾರರು (Older Workers), ಸಮಾಜದ ತಿರಸ್ಕಾರಕ್ಕೆ ಒಳಗಾದ ಸರಿಪಡಿಸಲಾಗದಸ ಯುವಜನತೆ, ತರಬೇತಿ ರಹಿತ ಕೆಲಸಗಾರರು (Unskilled workers).

ಈ ಮೇಲೆ ತಿಳಿಸಿದ ಉದ್ಯೋಗದಿಂದಾಗುವ ಹೊರತಳ್ಳುವಿಕೆಯ ಕಾರಣಗಳ ಜೊತೆಗೆ ಇನ್ನು ಹಲವು ಅಂಶಗಳು ಸಾಮಾಜಿಕ ಹೊರತಳ್ಳುವಿಕೆಯ ರಚನೆಗೆ ಕಾರಣವಾಗಿವೆ. ಅವು ಈ ಮುಂದಿನಂತಿವೆ:

ಕೆಟ್ಟ ಪರಿಸರ (Environmental Deprivation), ಹದಗೆಟ್ಟ ವಸತಿಯ ಸ್ಥಿತಿಗತಿಗಳು ({Bad Housing Conditions), ವಲಸೆ/ತೊರೆದ ಪ್ರದೇಶ (Derelict Land), ದೊಡ್ಡ ಅಪರಾಧ (High levels of Crime), ಅಸಮರ್ಪಕ ಸಂಪನ್ಮೂಲ (Insufficient Resources), ಕೆಲಸದ ಅಭಾವ (Lack of Work), ಮೂಲಭೂತ ಸೌಕರ್ಯಗಳ ಅಭಾವ (Lack of Basic Resources), ಕಾನೂನು ಸುವ್ಯವಸ್ಥೆಯ ಕೊರರೆ (Lack of Adequate Services), ಸರ್ಕಾರದ ನೀತಿ, ನಿಯಮ/ಯೋಜನೆಗಳಿಂದಾಗುವ ಪರಿಣಾಮ (Effects of Government Policies)

ಹೀಗೆ ಅನೇಕ ಅಂಶಗಳು ಸಾಮಾಜಿಕ ಹೊರತಳ್ಳುವಿಕೆಗೆ ಕಾರಣವಾಗುತ್ತವೆ. ಇಂತಹ ಹೊರತಳ್ಳುವಿಕೆಗೆ ಒಳಗಾದಂತಹ ವ್ಯಕ್ತಿಗಳಿಗೆ ಸಾಮಾಜಿಕ ಜೀವನ ಬೇಡವೆನ್ನಿಸಿ, ಕೌಟುಂಬಿಕ ಸಂಬಂಧಗಳಿಂದ ದೂರವಾಗಿ, ವ್ಯಕ್ತಿಗಳು ಗೊಂದಲಕ್ಕೆ ಸಿಲುಕಿ ತಮ್ಮ ನೆರೆಹೊರೆ, ಬಂಧು-ಬಾಂಧವರಿಂದ, ಸಾಮಾಜಿಕ ಸಂಬಂಧಗಳಿಂದ ಪರಿತ್ಯಜಿಸಲ್ಪಡುತ್ತಾರೆ. ಜೊತೆಗೆ ಒಂದು ರೀತಿಯ ಅರಾಜಕ ಸ್ತಿತಿ ಉಂಟಾಗಿ ವ್ಯಕ್ತಿಯ ನೈತಿಕತೆಯು ಕುಸಿದು ಬೀಳುತ್ತದೆ.

**ಹೊರತಳ್ಳುವಿಕೆಯ ಪ್ರಕಾರಗಳು**

ಸಾಮಾಜಿಕ ಹೊರತಳ್ಳುವಿಕೆಯು ಹಲವು ಬಗೆಯದು, ಹೊರತಳ್ಳುವಿಕೆಗೆ ಒಳಗಾದಂತಹ ವ್ಯಕ್ತಿಗಳಲ್ಲಿ ಹಲವು ಬಗೆ/ಪ್ರಕಾರಗಳನ್ನು ಗುರುತಿಸಬಹುದು. ಹೊರತಳ್ಳುವಿಕೆಯು ಕೇವಲ ಸಮಾಜದಿಂದ ಉಂಟಾಗುವಂತದ್ದಲ್ಲ. ಬದಲಾಗಿ ಇದು ಹಲವಾರು ಕಾರಣಗಳಿಂದ ಉಂಟಾಗುವಂಥದ್ದು. ಇಂತಹ ಅಂಶದಿಂದಲೇ ವ್ಯಕ್ತಿಗಳು ಹೊರತಳ್ಳುವಿಕೆಗೆ ಒಳಗಾಗುತ್ತಾರೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಯುರೋಪಿನ ಸಾಮಾಜಿಕ ನೀತಿಯ ಪುಸ್ತಕದಲ್ಲಿ ೧೫ ಬಗೆಯ ಹೊರತಳ್ಳುವಿಕೆಗಳನ್ನು ತಿಳಿಸಲಾಗಿದೆ. ಅವುಗಳೆಂದರೆ,

ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಗೆ ತಳ್ಳಲ್ಪಟ್ಟವರು (Social Marginalisation), ಹೊಸ ಬಡತನ (New Poverty), ಕಾನೂನು ಮತ್ತು ರಾಜಕೀಯ ಹೊರತಳ್ಳುವಿಕೆ (Legal/Palitical Exclusion), ಅಸಮರ್ಥತೆಯ ಅನಾನುಕೂಲಗಳು (Non-material Disadvantage), ಅತ್ಯಲ್ಪ ಸ್ವೀಕಾರಾರ್ಹ ಜೀವನ ಮಾರ್ಗ (Minimal Acceptable Way of life), ಸಾಂಸ್ಕೃತಿಕ ಹೊರತಳ್ಳುವಿಕೆ (ಜನಾಂಗ ಮತ್ತು ಲಿಂಗವನ್ನು ಒಳಗೊಂಡು) (Cultural Exclusion (including Race and Gender). ಕುಟುಂಬ ಮತ್ತು ಸಮುದಾಯದ ಹೊರತಳ್ಳುವಿಕೆ **(**Exclusion from family and the communitey), ಕಲ್ಯಾಣ ರಾಜ್ಯ ಮತ್ತು ಹೊರತಳ್ಳುವಿಕೆ (Exclusion from the welfare state), ದೀರ್ಘಕಾಲದ ಬಡತನ (Long-term Poverty), ಹೊರತಳ್ಳುವಿಕೆಯು ಬಹುಮುಖ್ಯವಾಗಿ ರಾಜಕೀಯ, ಆರ್ಥಿಕ ಜೀವನ ಮತ್ತು ಬಡತನವನ್ನು ಒಳಗೊಂಡಿದೆ (Exclusion from Mainstream Political and economic

life and Poverty), ರಾಷ್ಟ್ರದ ನಷ್ಟ/ಅನಭಿವೃದ್ಧಿ (State of Deprivation), ವೃತ್ತಿ ಸಂಬಂಧಗಳ ನಿರ್ಲಪ್ತತೆಯ ಹೊರತಳ್ಳುವಿಕೆ (Detachment from Work relations), ಆರ್ಥಿಕ ಹೊರತಳ್ಳುವಿಕೆ (Economic Exclusion), ಶ್ರಮಿಕ ವರ್ಗದ ಹೊರತಳ್ಳುವಿಕೆ (Exclusion from the labour market), ಗುಂಪು ಹೊರತಳ್ಳುವಿಕೆ (Group Exclusion).

ಇಂತಹ ಹಲವು ಬಗೆಗಳನ್ನು ಹೊಂದಿರುವ ಹೊರತಳ್ಳುವಿಕೆಯು ಬಹುಮುಖ್ಯವಾಗಿ ಬಡತನದೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಒಟ್ಟಿನಲ್ಲಿ ಹೇಳುವುದಾದರೆ, ಆರ್ಥಿಕ, ಸಾಮಾಜಿಕ ರಾಜಕೀಯ, ನೆರೆಹೊರೆ, ವೈಯಕ್ತಿಕ, ಪ್ರತ್ಯೇಕ ಗುಂಪು ಹೀಗೆ ಮುಂತಾದ ಹಲವು ಅಂಶಗಳು ಕೂಡ ಸಾಮಾಜಿಕ ಹೊರತಳ್ಳುವಿಕೆಯ ಬಹುಮುಖ್ಯ ಆಯಾಮಗಳಾಗಿವೆ.

ಸಾಮಾಜಿಕ ಹೊರತಳ್ಳುವಿಕೆಯು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ಇದು ಐತಿಹಾಸಿಕ ಮತ್ತು ಸಾಮಾಜಿಕ ತಪ್ಪುಗಳಿಂದ ಉಂಟಾದ ಒಂದು ವಿದ್ಯಮಾನವಾಗಿದೆ. ಹೊರತಳ್ಳುವಿಕೆಯ ಪ್ರಕ್ರಿಯೆಯನ್ನು ಹೆಚ್ಚಿನದಾಗಿ ಅಸಮಾನತೆಗಳಿಂದ ಕೂಡಿದ ಇಂಡಿಯಾದ ದೇಶವೂ ಸೇರಿದಂತೆ ಇತರೆ ಸಮಾಜಗಳಲ್ಲಿ ನೋಡುತ್ತೇವೆ. ಇಂತಹ ಅಸಮಾನತೆಗಳಿಂದ ಕೂಡಿದ ಸಮಾಜದಲ್ಲಿ ಏಣಿ ಶ್ರೇಣಿ ಪ್ರಕ್ರಿಯೆಯು ಸಾಮಾಜಿಕ ಗುಂಪುಗಳನ್ನು ಕಡಿದಾದ ಅಥವಾ ತುಂಬಾ ಆಳವಾದ ರಚನೆಯಲ್ಲಿ ಜನರನ್ನು ವಿಭಾಗಿಸಿ, ಶಕ್ತರು ಮತ್ತು ಅಶಕ್ತರು ಎಂಬುದಾಗಿ ವಿಭಾಗಿಸುತ್ತದೆ. ಕಡಿಮೆ ಸಂಖ್ಯೆಯಲ್ಲಿರುವ ಶಕ್ತರು ತಮ್ಮ ಸರ್ವ ವಿಧದ ಬಲದಿಂದಾಗಿ ಮುಖ್ಯವಾಹಿನಿಯ ಅಥವಾ ಮುಖ್ಯ ಸಮಾಜದ ರಾಜಕೀಯ ಮತ್ತು ಆರ್ಥಿಕತೆಯನ್ನು ನಿರ್ಧರಿಸುತ್ತಾರೆ. ಇನ್ನೊಂದೆಡೆ ಇದೇ ರಚನೆ ಅಥವಾ ಏಣಿ ಶ್ರೇಣಿಯ ಅತ್ಯಂತ ಕೆಳಸ್ಥರದಲ್ಲಿ ಬರುವ ಬಹು ಸಂಖ್ಯಾತ ಅಧಿಕಾರ ವಂಚಿತರು, ಅಶಕ್ತರಾಗಿಯೇ ಉಳಿದು, ಸಾಮಾಜಿಕ ಮತ್ತು ಆರ್ಥಿಕವಾಗಿ ಕೆಳಸ್ಥರವನ್ನಲಂಕರಿಸಿ ಸಾಮಾಜಿಕ ಕ್ರಮದ ಅಥವಾ ಶ್ರೇಣಿಯ ಅಂಚಿನಲ್ಲಿ ಬದುಕುಳಿಯಲು ಹರಸಾಹಸ ಮಾಡುತ್ತಾರೆ ಮತ್ತು ಸಮಾಜದ ಅಂಚಿಗೆ ತಳ್ಳಲ್ಪಡುತ್ತಾರೆ.

ಈ ಒಂದು ಅಸಮಾನ ಅಧಿಕಾರದ ಹಂಚಿಕೆಯ ಪ್ರಕ್ರಿಯೆಯು ಆರ್ಥಿಕ, ಸಾಮಾನ್ಯ, ಸಾಂಸ್ಥಿಕ ಮತ್ತು ಆದರ್ಶ ತತ್ವಗಳು ಮತ್ತು ಸಾಂಪ್ರದಾಯಿಕ ಮೌಲ್ಯಗಳು, ಜೊತೆಗೆ ಇತರೆ ವೈಚಾರಿಕ, ಸಮಾಜದ ನ್ಯಾಯ ರಚನೆಯಿಂದ ನ್ಯಾಯ ಸಮ್ಮತಿಸಲ್ಪಟ್ಟಿದೆ. ಅಸಮಾನ ಅಧಿಕಾರದ ಹಂಚಿಕೆ ಮತ್ತು ಅಸಮಾನ ಪಾಲು ಪದ್ಧತಿಯು ನ್ಯಾಯ ಸಮ್ಮತಿಯನ್ನು ಪಡೆದುದರ ಜೊತೆಗೆ, ಬಹುಸಂಖ್ಯಾತ ಜನರು ತಮ್ಮ ಇರುವಿಕೆಯನ್ನು ಅಂದರೆ ಅಧೀನತೆಯನ್ನು ಸಹಜ ಎಂದು ಒಪ್ಪಿಕೊಳ್ಳುವಂತೆ ಸಮರ್ಥನೆ ಅಥವಾ ಸಮಜಾಯಿಷಿಯನ್ನು ನೀಡಿದೆ. ಇದಲ್ಲದೆ ಈ ರೀತಿಯ ಸರ್ವ ವಿಧದ ಅಸಮಾನತೆಯನ್ನು ಪುನರ್ ನಿರೂಪಿಸಿ, ವಿಸ್ತರಿಸಿ, ಜೀವಂತವಾಗಿರಿಸಲು ಮತ್ತು ಹೊರತಳ್ಳುವಿಕೆಯ ಸಾಮಾಜಿಕ ನಿರ್ಮಾಣಕ್ಕೆ ಅಸಮಾನತೆಯನ್ನು ಸಮರ್ಥಿಸುವ ನ್ಯಾಯ ಸಮರ್ಥನೆಯು ಮಹತ್ತರ ಕೊಡುಗೆ ನೀಡಿದೆ. ಅಸಮಾನತೆಯ ಪ್ರಸ್ತುತತೆಯ ಮಹತ್ವವನ್ನು ಸಮರ್ಥಿಸಿ ಜೀವಂತವಾಗಿರಿಸಿದುದರಿಂದಾಗಿಯೇ ಸಮಾಜದಲ್ಲಿ ಹೊರತಳ್ಳುವಿಕೆಯು ನಿರ್ಮಾಣವಾಗಲು ಸಾಧ್ಯವಾಗಿದೆ. ಅಸಮಾನತೆಯ ಹರಿಕಾರರಾದ, ಸಾಂಪ್ರದಾಯಿಕ ಮೌಲ್ಯಗಳು ವೈಚಾರಿಕವಾದವುಗಳೆಂದು ಭ್ರಮಿಸುವ ಮನಸ್ಸುಗಳು, ಸಿದ್ಧಾಂತಗಳು ಮತ್ತು ಕೆಲವು ಸಮರ್ಥನೆಗಳು ಸಮಾಜದಲ್ಲಿ ಕಂದಕವನ್ನು ನಿರ್ಮಿಸಿ ಸಾಮಾಜಿಕ ಗುಂಪುಗಳನ್ನು ಎಂದೂ ಒಂದುಗೂಡದ ಹಾಗೆ ಮಾಡಿ, ಈ ಗುಂಪುಗಳ ಅಥವಾ ಸಂಸ್ಕೃತಿಗಳ ಮಧ್ಯೆ ಗೆರೆ ಅಥವಾ ಅಂಚನ್ನು ನಿರ್ಮಾಣ ಮಾಡಿ ಅವುಗಳು ಭದ್ರವಾಗುವಂತೆ ಮಾಡಿವೆ. ಸಮಾಜದ ಹೊರತಳ್ಳುವಿಕೆಯಿಂದ ಒಳತಳ್ಳುವಿಕೆಗೆ ಯತ್ನಿಸಿದಾಗ ವ್ಯಕ್ತಿಗಳೂ ಅಥವಾ ಗುಂಪುಗಳು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ ಹೊರತಳ್ಳುವಿಕೆ ಒಂದು ಸಹಜ ಪ್ರಕ್ರಿಯೆ ಎಂದು ತನ್ನ ಆದರ್ಶವಾದದ ಮೂಲಕ ಪ್ರಚುರಪಡಿಸುತ್ತದೆ. ಇದರಿಂದಾಗಿ ಸಮಾಜದಲ್ಲಿ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಸಾಮಾಜಿಕ ಗುಂಪುಗಳು ಸಮಾಜದ ಅಂಚಿನಿಂದ ಹೊರಗೇ ತಳ್ಳಲ್ಪಡುತ್ತವೆ. ಈ ಒಂದು ಪ್ರಕ್ರಿಯೆಯನ್ನು ಅಸಮಾನತೆಯಿಂದ ಕೂಡಿದ ಯಾವುದೇ ಒಂದು ಸಮಾಜದ ಇತಿಹಾಸವನ್ನು ನೋಡಿದರೆ ತಿಳಿಯುತ್ತದೆ. ಭಾರತೀಯ ಸಮಾಜದ ಸಂದರ್ಭದಲ್ಲಿ ಇದು ಪ್ರಸ್ತುತವಾಗುತ್ತದೆ. ಇಲ್ಲಿ ಅಂಚೀಕೃತ ಗುಂಪುಗಳೂ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿವೆ.

ಅಧೀನತೆಯ ರಚನೆಯನ್ನು ನ್ಯಾಯ ಸಮ್ಮತಗೊಳಿಸುವ ಪ್ರಯತ್ನಗಳು ಒಂದಡೆಯಾದರೆ, ಇನ್ನೊಂದೆಡೆ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳು ತಾವೇ ಆ ರಚನೆಯನ್ನು ನಾಶ ಮಾಡುವಂತೆ ಪ್ರೇರೇಪಿಸುವಂತಹ ಪ್ರಯತ್ನಗಳು. ಈ ಪ್ರಯತ್ನಗಳು

ಕೆಲವೊಮ್ಮೆ ಬೃಹತ್ ಸಾಮಾಜಿಕ ಚಳುವಳಿಗಳಾಗಿ ಮಾರ್ಪಟ್ಟಿವೆ. ಸಾಮಾಜಿಕ ಚಳುವಳಿಗಳು ದಮನಕಾರಿ ಸಾಂಸ್ಥಿಕ ರಚನೆ ಮತ್ತು ಅಧೀನತೆಯ ರಚನೆಯನ್ನು ಸಮರ್ಥಿಸುವ ನ್ಯಾಯ ಸಮ್ಮತ ಅಸಮರ್ಥತೆಯನ್ನು ಎದುರಿಸುವ ಪ್ರಯತ್ನ ಮಾಡಿವೆ. ಈ ಚಳುವಳಿಗಳು ತಲತಲಾಂತರದಿಂದ ಬಂದ ಸ್ಥಾಪಿತ ಹಿತಾಸಕ್ತಿಗಳೂ ಮತ್ತು ಅಸಮಾನತೆಯನ್ನು ಜೀವಂತವಾಗಿರಿಸಲು ಪ್ರಯತ್ನಿಸುವ ಮತ್ತು ಅಸಮಾನತೆ ಇಲ್ಲದಿದ್ದರೆ ಸಮಾಜವೇ ಬದುಕುಳಿಯುವುದಿಲ್ಲವೆಂಬ ಕುಟಿಲೋಪಾಯದ ತಂತ್ರದಿಂದ ಬದುಕುತ್ತಿವೆ. ಇಂತಹ ಸಾಮಾಜಿಕ ಗುಂಪುಗಳೇ ಇಂದಿಗೂ ಸಮಾಜದಲ್ಲಿ ಬಿರುಕುಗಳನ್ನು ಸೃಷ್ಟಿಸಿ ಸಮಾಜ ಛಿದ್ರ ಛಿದ್ರವಾಗಲು ಕಾರಣವಾಗಿ ಸಮಾಜದಲ್ಲಿ ಅಂಚುಗಳನ್ನು ಸೃಷ್ಟಿಸಿವೆ. ಯಾವಾಗಲೂ ಇಂತಹ ಅಧಿಕಾರಸ್ಥ ಶಕ್ತ ಗುಂಪುಗಳು ಸಮಾನತೆಗೋಸ್ಕರ ಹೋರಾಡುವ ಗುಂಪುಗಳನ್ನು, ತಮ್ಮ ಎಲ್ಲಾ ಅಧಿಕಾರ ಶಕ್ತಿಗಳನ್ನು ಬಳಸಿಕೊಂಡು, ದಮನ ಮಾಡಿ ಅಂತಹ ಗುಂಪುಗಳು ಶಾಶ್ವತವಾಗಿ ಸಮಾಜದ ಅಂಚಿನಲ್ಲಿರುವಂತೆ ಮಾಡಿವೆ. ಸಮಾನತೆಗೋಸ್ಕರ ಅಥವಾ ಸಮಾನತೆಯಿಂದ ಕೂಡಿರುವ ಸಮಾಜ ನಿರ್ಮಾಣ ಮಾಡಲು ಆಸಕ್ತ ಗುಂಪುಗಳು ಸಾಮಾಜಿಕ ಚಳುವಳಿಗಳು ಸಾಮೂಹಿಕ ಸಂಘಟನೆಯ ಮೂಲಕ ಪ್ರಯತ್ನಪಡುತ್ತಿರುತ್ತವೆ. ಇಂತಹ ಪ್ರಯತ್ನಗಳನ್ನು ಕೆಲವು ಸ್ಥಾಪಿತ ಹಿತಾಸಕ್ತಿಗಳು ಮತ್ತು ಯಾವಾಗಲೂ ಅಧೀನತೆಯನ್ನು ಪ್ರತಿಪಾದಿಸುವ ಗುಂಪುಗಳು ನಾಶಪಡಿಸುತ್ತವೆ. ಏಕೆಂದರೆ ಇಂತಹ ಗುಂಪುಗಳಿಗೆ ಅಧೀನ ಗುಂಪುಗಳು ಇಲ್ಲದೆ ಬದುಕು ಸಾಧ್ಯವಿಲ್ಲ ಎಂಬ ಅರಿವು ಬಂದಿದ್ದು ತಮ್ಮ ಉಳಿವಿಕೆಗೋಸ್ಕರ ಕಪಟ ತಂತ್ರದ ಮೂಲಕ ತಮ್ಮ ಹಿತಾಸಕ್ತರನ್ನು ರಕ್ಷಿಸಿಕೊಂಡೇ ಅಧೀನತೆಯ ರಚನೆಯನ್ನು ಮತ್ತು ಏಣಿ ಶ್ರೇಣಿಯ ಅಸ್ತಿತ್ವವನ್ನು ಉಳಿಸಿ, ಸಮಾಜದಲ್ಲಿ ಗೋಡೆಗಳನ್ನು ನಿರ್ಮಿಸುತ್ತವೆ. ಈ ಸಾಮಾಜಿಕ ಗೋಡೆಗಳೇ ಸಮಾಜದ ಅಂಚುಗಳಾಗಿ ಉಳಿಯುತ್ತವೆ. ಇದರಿಂದ ಎರಡು ವಿಭಿನ್ನ ಸಂಸ್ಕೃತಿಗಳು ಮೈದಳೆದು, ಉಚ್ಛ ಸಂಸ್ಕೃತಿ, ನೀಚ ಅಥವಾ ಕೀಳರಿಮೆಯ ಸಂಸ್ಕೃತಿಗಳೆಂದು ಹೆಸರಿಸಲ್ಪಡುತ್ತವೆ. ಇಂತಹ ಒಂದೇ ಸಮಾಜದಲ್ಲಿ ಕಂಡುಬರುವ ವಿಭಿನ್ನ ಸಂಸ್ಕೃತಿಗಳು ಅಭಿವೃದ್ಧಿ ಮತ್ತು ಸಮಗ್ರತೆಯ ದೃಷ್ಟಿಯಿಂದ ತುಂಬಾ ಆತಂಕಕಾರಿಯಾದವುಗಳು. ಇವು ವ್ಯಕ್ತಿಗಳು ಮತ್ತು ಗುಂಪುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ತ್ರಿಶಂಕು ಸ್ಥಿತಿಯಲ್ಲಿಡುತ್ತವೆ. ಅಂತಹ ಸಂದರ್ಭದಲ್ಲಿ ಅಂಚೀಕೃತ ಗುಂಪುಗಳು ಸಾಮಾಜಿಕವಾಗಿ ಹೊರತಳ್ಳಪಡುತ್ತವೆ.

ಸಾಮಾಜಿಕ ಹೊರತಳ್ಳುವಿಕೆಯ ಪ್ರಕ್ರಿಯೆಯು ವ್ಯಕ್ತಿ ಮತ್ತು ಗುಂಪುಗಳಿಗೆ ಒಂದು ವರದಾನವಾಗಿ ಪರಿಣಮಿಸದೆ ಒಂದು ಶಾಪವಾಗಿ ಪರಿಣಮಿಸುತ್ತದೆ. ಇದಕ್ಕೆ ಸಿಕ್ಕ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, ಹಲವಾರು ಸಾಮಾಜಿಕ ರೋಗ ರುಜಿನಗಳಿಗೆ ತುತ್ತಾಗುತ್ತಾರೆ. ಇವರು ಪಡುವ ಬವಣೆ ಅಂತಿಂಥದ್ದಾಗಿರುವುದಿಲ್ಲ. ಬದಲಾಗಿ ಇದು ವ್ಯಕ್ತಿಗಳು ಗುಂಪುಗಳನ್ನು ನಾಶದಂಚಿಗೆ ತಳ್ಳುತ್ತದೆ. ಕೆಲವೊಮ್ಮೆ ಹೊರತಳ್ಳುವಿಕೆಯಿಂದಾಗಿ ವ್ಯಕ್ತಿಗಳು ಬದುಕಿನಲ್ಲಿ ಸಾಮಾಜಿಕ ಕಂಟಕವಾಗಿ, ಬುದ್ಧಿಮಾಂದ್ಯರಾಗಿ, ದೈಹಿಕವಾಗಿ ಹಾಗೂ ನಾನಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ವ್ಯಕ್ತಿಯ ಆಯಸ್ಸು ಕಡಿಮೆಯಾಗಿ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ.

**ಭಾರತೀಯ ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಹೊರತಳ್ಳುವಿಕೆ (Indian Caste System and Social Exclusion)**

ಭಾರತದ ಜಾತಿ ಪದ್ಧತಿಯು ಸಾಮಾಜಿಕ ಹೊರತಳ್ಳುವಿಕೆಗೆ ಮುಖ್ಯವಾದ ಕಾರಣವಾಗಿದೆ. ಜಾತಿ ಪದ್ಧತಿಯು ಒಂದು ಏಕ ತೆರನಾದ ಗುಂಪಾಗಿರದೇ ಹಲವಾರು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಹೊಂದಿದೆ. ಇಂತಹ ಜಾತಿಯ ಸಾಂಸ್ಕೃತಿಕ ವೈರುಧ್ಯಗಳನ್ನು ಪ್ರಪಂಚದ ಯಾವುದೇ ಭಾಗದಲ್ಲಿಯೂ ನೋಡಲು ಸಾಧ್ಯವಿಲ್ಲ. ಜಾತಿಯ ಸಾಂಸ್ಕೃತಿಕ ಭಿನ್ನತೆಗಳಿಂದಾಗಿಯೇ ಇಲ್ಲಿಯ ಸಾಮಾಜಿಕ ಗುಂಪುಗಳು ಒಡೆದು ಹೋಗಿವೆ. ಸಾಂಸ್ಕೃತಿಕ ಭಿನ್ನತೆಯಿಂದಾಗಿಯೇ ಸಾಮಾಜಿಕ ಹೊರತಳ್ಳುವಿಕೆಯ ಪ್ರಕ್ರಿಯೆ ವಿಸ್ತಾರವಾಗುತ್ತಾ ಹೋಗಿ ಕೆಲವು ಸಮುದಾಯಗಳನ್ನು ತನ್ನ ತೆಕ್ಕೆಯೊಳಕ್ಕೆ ಹಾಕಿಕೊಳ್ಳುತ್ತದೆ. ಭಾರತೀಯ ಸಮಾಜದಲ್ಲಿ ಭಿನ್ನ ಭಿನ್ನ ಸಂಸ್ಕೃತಿ, ಸಂಪ್ರದಾಯ, ಕಟ್ಟುಪಾಡು, ನೀತಿ, ಊಟೋಪಚಾರ, ಉದ್ಯೋಗಗಳಿವೆ. ಇಂತಹ ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ಹುಟ್ಟಿ ಬೆಳೆದ ವ್ಯಕ್ತಿಗಳು ಸಹಜವಾಗಿಯೇ ಆಯಾ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡು, ಸಾಮಾಜೀಕರಣಗೊಂಡು ಬೆಳೆಯುತ್ತಾರೆ. ಈ ರೀತಿಯ ವಿಭಿನ್ನ ಸಂಸ್ಕೃತಿಗಳಲ್ಲಿ ಕೆಲವು ಕೀಳರಿಮೆಯ ಮತ್ತು ಅಧೀನ ಸಂಸ್ಕೃತಿಗಳೆಂದು ಬಿಂಬಿತವಾಗುತ್ತವೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಗಳು ತಮ್ಮ ಸಂಸ್ಕೃತಿಯು ಕೀಳೆಂಬ ಹಣೆಪಟ್ಟಿಯಿಂದ ಹೊರಬರಲು ಹಲವು ತೆರನಾದ ಪ್ರಯತ್ನಗಳನ್ನು ಮಾಡುತ್ತಾರೆ. ಇದು ಸಾಮಾಜಿಕ ಚಳುವಳಿಯಾಗಿರಬಹುದು ಇಲ್ಲವೇ ಇತರ ಸಾಮಾಜಿಕ ಚಲನೆಯ ವಿಧಾನಗಳಾಗಿರಬಹುದು. ಇವುಗಳ ಮೂಲಕ ಉತ್ತಮ

ಸಂಸ್ಕೃತಿಯೆಂದು ಬಿಂಬಿತವಾಗಿರುವ ಮತ್ತು ಹಣೆಪಟ್ಟಿ ಹೊಂದಿರುವ ಸಂಸ್ಕೃತಿಯನ್ನು ಅನುಕರಣೆ ಮಾಡುವ ಸಂದರ್ಭದಲ್ಲಿ ಕೆಳ ಸಂಸ್ಕೃತಿ ಅಥವಾ ಕೆಳವರ್ಗದ ಜನರು ಸಮಾಜದ ಅಂಚಿಗೆ ತಳ್ಳಲ್ಪಡುತ್ತಾರೆ. ಹೊರತಳ್ಳಲ್ಪಟ್ಟ ಸಂದರ್ಭದಲ್ಲಿ ಇವರು ಇತ್ತ ಇವರ ಮೂಲ ಸಂಸ್ಕೃತಿಯನ್ನು ಬಿಡಲಾಗದೆ ಅತ್ತ ಹೊಸ ಅಥವಾ ಎಲ್ಲರಿಂದ ಸರಿ ಎನಿಸಿಕೊಂಡಂತಹ ಅಥವಾ ಒಪ್ಪಿಗೆಯಾದ ಮುಖ್ಯವಾಹಿನಿಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಸ್ವೀಕರಿಸಲಾಗದೆ ತೊಳಲಾಟದಲ್ಲಿ ಸಿಲುಕುತ್ತಾರೆ. ಹಂತ ಹಂತವಾಗಿ ನಡೆಯುವ ಈ ಪ್ರಕ್ರಿಯೆಯಲ್ಲಿ ತಮ್ಮ ದೇಶೀಯ ಅಥವಾ ಮೂಲ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾರೆ. ಮುಖ್ಯ ಸಮಾಜದ ಸಂಸ್ಕೃತಿಯನ್ನು ಸಂಪೂರ್ಣ ಅನುಕರಣೆ ಮಾಡದಂತಹ ಅಸಾಮರ್ಥ್ಯತೆಯಿಂದ ಬಳಲುತ್ತಾರೆ. ಇದರ ಪರಿಣಾಮವಾಗಿ ವ್ಯಕ್ತಿಗಳು ಅಥವಾ ಗುಂಪುಗಳು ಹೊರತಳ್ಳಲ್ಪಟ್ಟ ಗುಂಪುಗಳಾಗಿ ಹೊರಹೊಮ್ಮುತ್ತಾರೆ.

ಹೊರತಳ್ಳಲ್ಪಟ್ಟ ಗುಂಪುಗಳಾಗಿ ಹೊರ ಹೊಮ್ಮಿದ ಗುಂಪುಗಳು ಹಲವಾರು ನ್ಯೂನತೆಗಳಿಂದ ಬಳಲುತ್ತವೆ. ಇವರ ಸಮಸ್ಯೆಗಳು ಕೇವಲ ವ್ಯಕ್ತಿಗಳ ನ್ಯೂನತೆಗಳಾಗಿರದೇ ಸಮಾಜದ ಸಮಸ್ಯೆಗಳಾಗಿರುತ್ತವೆ. ಇದು ಸಮಾಜಕ್ಕೆ ಮತ್ತು ವ್ಯಕ್ತಿಗಳಿಗೆ ಸವಾಲು ಮತ್ತು ಸಮಸ್ಯೋಪಾದಿಯಲ್ಲಿ ಕಾಡುತ್ತಿರುತ್ತಿದೆ. ಉದಾಹರಣೆ: ಸಂಸ್ಕೃತೀಕರಣ ಮತ್ತು ಪಾಶ್ಚಾತ್ಯೀಕರಣದಂತಹ ಪ್ರಕ್ರಿಯೆಗಳನ್ನು ಅನುಕರಣೆ ಮಾಡುವಂತಹ ಸಂದರ್ಭದಲ್ಲಿ ವ್ಯಕ್ತಿಗಳು ಮತ್ತು ಗುಂಪುಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗುತ್ತಾರೆ. ಅಂದರೆ ಇಂತಹ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗಳು ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ಹೊರತಳ್ಳುವಿಕೆಯ ಸಂದರ್ಭವನ್ನು ಸೃಷ್ಟಿಸುತ್ತವೆ. ಬದಲಾವಣೆಯನ್ನು ಇಷ್ಟಪಡುವ ಸಾಮಾಜಿಕ ಗುಂಪುಗಳು ಬದಲಾವಣೆಯ ಪ್ರಕ್ರಿಯೆಯಲ್ಲಿ ಅಂಚಿನಲ್ಲಿ ಸಿಲುಕಿ ಒದ್ದಾಡುತ್ತಿರುತ್ತವೆ. ಆಗ ಇಂತಹ ಗುಂಪುಗಳ ಬವಣೆ ಮುಗಿಲು ಮುಟ್ಟುತ್ತದೆ. ಇದರಿಂದ ನಾನಾ ತರಹದ ಸಾಮಾಜಿಕ ಮತ್ತು ಜನಾಂಗೀಯ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಆದ್ದರಿಂದ ಜಾಗತೀಕರಣದ ಇಂತಹ ಸಂದರ್ಭದಲ್ಲಿ ದೇಶೀಯ ಸಂಸ್ಕೃತಿಯನ್ನು ಅಥವಾ ಸಮುದಾಯಗಳು ತಮ್ಮ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಅವುಗಳನ್ನು ಜಾಗತೀಕರಿಸಿ ಉಳಿಸಿ ಬೆಳೆಸಬೇಕಾಗುತ್ತದೆ. ಆಗ ಸ್ವಲ್ಪಮಟ್ಟಿನ ಹೊರತಳ್ಳುವಿಕೆಯ ಸಂದರ್ಭ ಕಡಿಮೆಯಾಗಬಹುದು.

(2)

**ಸಾಮಾಜಿಕ ಹೊರತಳ್ಳುವಿಕೆ, ದಲಿತರು ಮತ್ತು ಹಿಂದುಳಿದ ವರ್ಗಗಳು**

ಭಾರತೀಯ ಸಮಾಜದಲ್ಲಿ ದಲಿತ ಮತ್ತು ಹಿಂದುಳಿದ ಸಮುದಾಯಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಅಂಚೀಕೃತ ಸಮುದಾಯಗಳಾಗಿವೆ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹೊರತಳ್ಳುವಿಕೆಯ ಜೊತೆಗೆ ಶೈಕ್ಷಣಿಕವಾಗಿ ಅಂಚೀಕೃತ ಸಮುದಾಯವಾಗಿವೆ. ದಲಿತ ಸಮುದಾಯಗಳನ್ನು ನಿರ್ದಿಷ್ಟ ವ್ಯಾಖ್ಯಾನದ ಅಡಿಯಲ್ಲಿ ತರಲಾಗದಿದ್ದರೂ ಇವರನ್ನು ಹಿಂದುಳಿದವರು, ವಂಚಿತರು, ಅಲಕ್ಷಿತರು, ಅಸಮಾನತೆಗೊಳಗಾದವರು ಎಂಬುದಾಗಿ ಕರೆಯಲಾಗುತ್ತದೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿರುವ ಸಮುದಾಯದವರೇ ದಲಿತ ಸಮುದಾಯದವರು ಎಂಬುದಾಗಿ ಕರೆಯಲಾಗುತ್ತದೆ.

ಹಿಂದುಳಿದ ವರ್ಗಗಳೆಂದರೇನು? ಹಿಂದುಳಿದಿರುವಿಕೆಯನ್ನು ಗುರುತಿಸುವುದು ಹೇಗೆ? ಗಮನಿಸಬೇಕಾದುದೆಂದರೆ, ಈ ಪ್ರಶ್ನೆಗಳಿಗೆ ಸಂವಿಧಾನಾತ್ಮಕ ಉತ್ತರ ದೊರೆಯುವಿದಲ್ಲ. ಡಾ.ಅಂಬೇಡ್ಕರ್ ಹೇಳಿದಂತೆ ಹಿಂದುಳಿದ ವರ್ಗಗಳೆಂದರೆ ಬೇರೆ ಏನೂ ಅಲ್ಲ, ಅವರೊಂದು ಅನೇಕ ಜಾತಿಗಳ ಸಮೂಹ. ಇಷ್ಟಾದರೂ ಸಂವಿಧಾನವು ಹಿಂದುಳಿದ ವರ್ಗಗಳೆಂದು ನಿರ್ಧರಿಸಲು ಯಾವ ವಿಧಾನಗಳನ್ನು ಸೂಚಿಸುವುದಿಲ್ಲ. ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರು ಯಾರು ಎಂಬುದನ್ನು ನಿರ್ದಿಷ್ಟಪಡಿಸುವುದಿಲ್ಲ. ಇದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ಧರಿಸಬೇಕೆಂದು ಅದು ಸೂಚಿಸುತ್ತದೆ (ತೆಲಗಾವಿ ಲಕ್ಷ್ಮಣ, ೧೯೯೯:೨). ಆದ್ದರಿಂದ ಹಿಂದುಳಿದ ವರ್ಗಗಳೆಂದರೆ ಸಾಮಾನ್ಯವಾಗಿ ದಲಿತ ಅಥವಾ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳೆಂದು ಅರ್ಥವಾಗುತ್ತದೆ. ಕಾನೂನಾತ್ಮಕವಾಗಿ ಸಂವಿಧಾನದ ಪರಿಶಿಷ್ಟ ಪಟ್ಟಿಯಲ್ಲಿ ಸೇರಿರುವ ಅಂದರೆ ಪರಿಶಿಷ್ಟ ಜಾತಿ/ಪಂಗಡದ ಪಟ್ಟಿಯಲ್ಲಿ ಬರುವ ಎಲ್ಲಾ ಸಮುದಾಯಗಳು

ಹಿಂದುಳಿದ ಸಮುದಾಯಗಳೇ. ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಯ ಹಿನ್ನೆಲೆಯಿಂದಾಗಿಯೇ ದಲಿತ ಸಮುದಾಯವನ್ನು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸಿರುವುದು ವೇದ್ಯವಾಗುತ್ತದೆ. ಆದರೆ, ಕೆಲವೊಂದು ಹಿಂದುಳಿದ ಸಮುದಾಯಗಳೂ ಕಾನೂನಾತ್ಮಕ ಅಥವಾ ಸಂವಿಧಾನಾತ್ಮಕವಾಗಿ ರಚಿತವಾದ ಪಟ್ಟಿಯಲ್ಲಿ ಸೇರ್ಪಡೆಗೊಂಡಿಲ್ಲ. ಕಾರಣ ಸ್ವಲ್ಪ ಮಟ್ಟಿನ ಆರ್ಥಿಕ ಮತ್ತು ಸಾಮೂಹಿಕ ಸ್ಥಿತಿಗತಿಗಳು ಉತ್ತಮ ಮಟ್ಟದ್ದಾಗಿರುವುದು. ಜೊತೆಗೆ ಅಸ್ಪೃಶ್ಯತೆಯ ಸಾಮಾಜಿಕ ಕಳಂಕ ಇರುವುದಿಲ್ಲ. ಪರಿಶಿಷ್ಟ ಪಟ್ಟಿಯಲ್ಲಿರುವ ಸಮುದಾಯಗಳಲ್ಲದೇ, ಇತರೆ ಬುಡಕಟ್ಟು, ಮತ್ತು ಅಲಕ್ಷಿತ ಸಮುದಾಯದವರನ್ನು ತಮ್ಮ ಸರ್ವ ವಿಧದ ಹಿಂದುಳಿದಿರುವಿಕೆಯಿಂದಾಗಿ ಹಿಂದುಳಿದ ಅಥವಾ ಬುಡಕಟ್ಟು ಅಥವಾ ಇತರೆ ಹಿಂದುಳಿದ ವರ್ಗಗಳೆಂದು ಕರೆಯುವುದನ್ನು ನಾವು ನೋಡಬಹುದಾಗಿದೆ.

ದಲಿತ ಎಂಬ ಶಬ್ದವು ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಚಳುವಳಿಗಳಿಂದುಂಟಾದ ಜಾಗೃತಿಯಿಂದ ಉದ್ಭವವಾದ ಶಬ್ದ ಎಂಬುದಾಗಿ ಹೇಳಬಹುದು. ದಲಿತ ಎಂದರೆ ಹಿಂಸೆಗೆ ಒಳಗಾದ, ತುಳಿತಕ್ಕೆ ಒಳಗಾದ, ಶೋಷಣೆಗೆ ಒಳಗಾದ ಎಂಬುದರಿಂದ ಮೊದಗ್ಗೊಂಡು ಅಂದೊಂದು ಜೀವನ ಪದ್ಧತಿಯೆನ್ನುವವರೆಗೆ ಅದರ ಅರ್ಥಗಳನ್ನು ವಿಸ್ತರಿಸಲಾಗಿದೆ ಎಂಬುದಾಗಿ ಪ್ರೊ.ಲಕ್ಷ್ಮಣ ತೆಲಗಾವಿ(೧೯೯೯:೮). ಇದರಿಂದ ತಿಳಿದುಬರುವುದೇನೆಂದರೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ಮತ್ತು ಶೋಷಣೆಗೊಳಗಾಗಿರುವ ಸಮುದಾಯವನ್ನು ದಲಿತ ಸಮುದಾಯ ಎನ್ನಬಹುದು (ಗುರುಲಿಂಗಯ್ಯ. ಎಂ., ೨೦೦೮:೩೦).

ನಿಜಕ್ಕೂ ಹಿಂದುಳಿದವರೆಂದರೆ ಯಾರು? ಎಂಬ ಪ್ರಶ್ನೆ ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿವಾದಗಳನ್ನು, ಚಳುವಳಿಗಳನ್ನು ಸುಟ್ಟುಹಾಕಿರುವುದನ್ನು ನೋಡಬಹುದು. ಅಸ್ಪೃಶ್ಯರನ್ನು ಒಳಗೊಂಡ ದಲಿತ ವರ್ಗವನ್ನು ಹಿಂದುಳಿದ ವರ್ಗಗಳ ವ್ಯಾಪ್ತಿಗೆ ತರುವುದು ಒಂದು ಕಾರಣವಾದರೆ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಇತರ ಎಲ್ಲಾ ಜಾತಿ-ವರ್ಗಗಳನ್ನು ಹಿಂದುಳಿದಿರುವಿಕೆಯ ಆಧಾರದ ಮೇಲೆ ಗುರುತಿಸುವುದು ಇನ್ನೊಂದು ಕಾರಣವೆನಿಸುತ್ತದೆ. ಇಂತಹ ವರ್ಗೀಕರಣದ ಹಿನ್ನೆಲೆಯಲ್ಲಿ ಜಾತಿ-ವರ್ಗಗಳನ್ನು ಸರಿಯಾಗಿ ಗುರುತಿಸದಿರುವುದೇ ಇಂತಹ ಸಮಸ್ಯೆಗಳು ಹುಟ್ಟಿಕೊಳ್ಳಲು ಆಸ್ಪದವಾಗಿದೆ. ಜಾತಿಗಳ ಹಿಂದುಳಿದಿರುವುಕೆಯನ್ನು ಗುರುತಿಸುವ ಪ್ರಶ್ನೆ ಎದುರಾಗಿರುವುದು ಸ್ವಾತಂತ್ರ್ಯಾ ನಂತರದಲ್ಲಿ ಎಂಬುದು ನಿಜ. ಸ್ವಾತಂತ್ರ್ಯ ಪೂರ್ವದಲ್ಲಿ ಶಾಸಕಾಂಗದ ಪರಿಮಿತಿಗಷ್ಟೆ ಒಳಪಟ್ಟಿದ್ದ ನಿಮ್ನ ವರ್ಗ ಮತ್ತು ಹಿಂದುಳಿದ ವರ್ಗಗಳನ್ನು ನಿರ್ಧರಿಸುವ ಹೊಣೆಗಾರಿಕೆ, ಆನಂತರದಲ್ಲಿ ನ್ಯಾಯಾಂಗದ ಪ್ರವೇಶದೊಡನೆ ಅಖಿಲ ಭಾರತ ವ್ಯಾಪ್ತಿಗೆ ವಿಸ್ತಾರಗೊಂಡಿತೆನ್ನಬಹುದು ಎಂಬುದಾಗಿ ಪ್ರೊ. ಲಕ್ಷ್ಮಣ ತೆಲಗಾವಿ (೧೯೯೯:೨- ೩) ಅಭಿಪ್ರಾಯಪಟ್ಟಿದ್ದಾರೆ.

ಹಿಂದುಳಿದ ವರ್ಗಗಳ ಪದದ ಬಳಕೆಯನ್ನು ೧೯ನೇ ಶತಮಾನದ ಪ್ರಾರಂಭದಿಂದಲೂ ವಿವಿಧ ರೀತಿಯಲ್ಲಿ ಬಳಸುತ್ತಿರುವುದನ್ನು ನೋಡಬಹುದಾಗಿದೆ. ಆಗ ಹಿಂದುಳಿದ ವರ್ಗಗಳನ್ನು ಡಿಪ್ರೆಸ್ಸಡ್ ವರ್ಗಗಳೆಂದು ಕರೆಯಲಾಯಿತು. ಕೇವಲ ಅಸ್ಪೃಶ್ಯ ವರ್ಗದವರನ್ನು ಗುರುತಿಸಲು ಮಾತ್ರ ಈ ಪದವನ್ನು ಬಳಸಲಾಗುತ್ತಿತ್ತು. ಜೊತೆಗೆ ದೇಶದ ಇತರೆ ಕಡೆಗಳಲ್ಲಿ ಕ್ರಿಮಿನಲ್ ಬುಡಕಟ್ಟುಗಳನ್ನು ಮತ್ತು ಮೂಲನಿವಾಸಿಗಳನ್ನು ಈ ಹೆಸರುಗಳಿಂದ ಕರೆಯುತ್ತಿದ್ದರು. ಆದರೆ ಇಂದು ದೇಶದ ಜನಸಂಖ್ಯೆ ೧/೩ರಷ್ಟು ಜನಸಂಖ್ಯೆ ಹಿಂದುಳಿದ ವರ್ಗಗಳ ಜನಸಂಖ್ಯೆಯಾಗಿದೆ. ಹಿಂದುಳಿದ ವರ್ಗಗಳ ವರ್ಗೀಕರಣವು ಮುಖ್ಯವಾಗಿ ಮೂರು ಅಂಶಗಳಿಂದ ಕೂಡಿದ ಸಾಮಾಜಿಕ ವರ್ಗವಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳು. ಪರಿಶಿಷ್ಟ ಜಾತಗಿ ಮತ್ತು ಪಂಗಡಗಳನ್ನು ಸಂವಿಧಾನಾತ್ಮಕವಾಗಿ ವ್ಯಾಖ್ಯಾನಿಸಲಾಗಿದೆ. ಇತರೆ ಹಿಂದುಳಿದ ವರ್ಗವು ಉಳಿಕೆ ಗುಂಪಾಗಿದ್ದು, ಅದರ ಸ್ಥಾನಮಾನ ಅಸ್ಪಷ್ಟವಾಗಿದೆ, ವ್ಯಾಖ್ಯಾನ ಮಾಡಲು ಕಷ್ಟ ಸಾಧ್ಯವಾಗುತ್ತದೆ. ಸಂವಿಧಾನದಲ್ಲಿ ಸ್ಪಷ್ಟ ವ್ಯಾಖ್ಯಾನವಿರುವುದಿಲ್ಲ. ಆದರೆ, ಸರ್ಕಾರದ (ಕೇಂದ್ರ ಅಥವಾ ರಾಜ್ಯ ಸರ್ಕಾರ) ದೃಷ್ಟಿಯಿಂದ ಯಾವ ಸಮುದಾಯ ಅಥವಾ ವರ್ಗ ಹಿಂದುಳಿದ ವರ್ಗವಾಗಿದೆಯೋ ಅದೇ ಹಿಂದುಳಿದ ವರ್ಗವೆಂದು ಕರೆಯಲ್ಪಡುತ್ತದೆ. ಇದುವರೆವಿಗೂ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರಗಳಾಗಲೀ ಸ್ಪಷ್ಟವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಆದರೆ ಆಗಾಗ್ಗೆ ಸರ್ಕಾರಗಳು ಕೆಲವೊಂದು ಮಾಪನಗಳನ್ನು ಉಪಯೋಗಿಸಿ ಹಿಂದುಳಿದ ವರ್ಗಗಳನ್ನು ಗುರುತಿಸಿರುವುದು ಕಂಡುಬಂದರೂ, ನಿಜವಾದ ಹಿಂದುಳಿದ ವರ್ಗಗಳನ್ನು ಗುರುತಿಸಲು ಸಾಧ್ಯವಾಗಿಲ್ಲ ಎಂಬ ಕೂಗು ಕೇಳಿಬರುತ್ತಲೇ

ಇದೆ. ಜೊತೆಗೆ ಪ್ರಜಾಪ್ರಭುತ್ವದಂತಹ ಭಾರತ ದೇಶದಲ್ಲಿ ಕೆಲವೊಂದು ಸಮುದಾಯಗಳು ರಾಜಕೀಯವಾಗಿ ಪ್ರಬಲವಾಗಿದ್ದು, ಸವಲತ್ತುಗಳಿಗಾಗಿ ಹಿಂದುಳಿದ ವರ್ಗಗಳ ಟ್ಯಾಗ್‌ಗೆ ಅಥವಾ ಐಡೆಂಟಿಟಿಗೆ ಹೋರಾಟ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಅಂದರೆ, ಹಿಂದುಳಿಯಲು ಸ್ಪರ್ಧೆಯೇ ಏರ್ಪಟ್ಟಂತಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಅತ್ಯಂತ ನಿಕೃಷ್ಟ ಮತ್ತು ನಿಜವಾದ ಹಿಂದುಳಿದ ವರ್ಗಗಳು ಕಣ್ಣಿಗೆ ಕಾಣಿಸದೇ ಮುಖ್ಯವಾಹಿನಿಗೆ ಬರದೇ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗುತ್ತವೆ.

ಸಂವಿಧಾನದ ಆಶಯದ ಪ್ರಕಾರ ಕೆಲವೊಂದು ರಾಜ್ಯಗಳು ನಿಜವಾದ ಹಿಂದುಳಿದ ವರ್ಗಗಳನ್ನು ಗುರುತಿಸಲು ಶಾಶ್ವತ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿರುವುದನ್ನು ಕಾಣಬಹುದಾಗಿದೆ. ಈ ಆಯೋಗಗಳ ಮುಖ್ಯ ಕರ್ತವ್ಯವೆಂದರೆ ವಿವಿಧ ಮಾನದಂಡಗಳನ್ನು ಉಪಯೋಗಿಸಿ ನಿಜವಾದ ಹಿಂದುಳಿದ ವರ್ಗಗಳನ್ನು ಗುರುತಿಸುವುದು ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ನಿಜವಾದ ಹಿಂದುಳಿವ ವರ್ಗಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಸಾಮಾನ್ಯವಾಗಿ, ಸಾಮಾಜಿಕವಾಘಿ ಮತ್ತು ಶೈಕ್ಷಣಿಕ ಹಿಂದುಳಿದ ಸಮುದಾಯಗಳನ್ನು ಹಿಂದುಳಿದ ವರ್ಗಗಳೆಂದು ಕರೆಯಬಹುದಾಗಿದೆ. ಇಲ್ಲಿ ಆರ್ಥಿಕ ಸ್ಥಾನಮಾನಕ್ಕಿಂತ, ಸಾಮಾಜಿಕ ಮತ್ತು ಶೈಕ್ಷಣ ಇಕ ಹಿಂದುಳಿದಿರುವಿಕೆ ಇಂಡಿಯಾದ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಕೆನೆಪದರ ನೀತಿಯನ್ನು ಅನುಸರಿಸಿದರೂ ಅಥವಾ ಆರ್ಥೀಕ ಮಾನದಂಡವನ್ನು ಆಧಾರವನ್ನಾಗಿಸಿದರೂ ಸಾಮಾಜಿಕ ಹಿಂದುಳಿದಿರುವಿಕೆ ಮುಖ್ಯವಾದ ಮಾಪಕವಾಗಬೇಕಾಗುತ್ತದೆ. ಏಕೆಂದರೆ, ಭಾರತದಲ್ಲಿ ಜಾತಿ ವ್ಯವಸ್ಥೆಯಿರುವುದರಿಂದ ಜಾತಿ ವ್ಯವಸ್ಥೆಯೇ ಎಲ್ಲಾ ಅಸಮಾನತೆಗಳಲಿಗೆ ಕಾರಣವಾಗುವುರಿಂದ, ಜಾತಿ ವ್ಯವಸ್ಥೆಯು ಹೋಗುವವರಿಗೆ ಸಾಮಾಜಿಕ ಮಾನದಂಡವೇ ಮುಖ್ಯವಾಗುತ್ತದೆ. ಅಂದರೆ ಜಾತಿಯನ್ನು ಮುಖ್ಯ ಮಾನದಂಡವನ್ನಾಗಿಟ್ಟುಕೊಂಡು ಒಂದು ಸಮುದಾಯದ ಹಿಂದುಳಿದಿರುವಿಕೆಯನ್ನು ನಿರ್ಧರಿಸಬೇಕಾಗುತ್ತದೆ. ಜೊತೆಗೆ ಶೈಕ್ಷಣಿ ಪ್ರಗತಿ ಅಥವಾ ಶಿಕ್ಷಣವನ್ನು ಸಹ ಒಂದು ಮಾನದಂಡವನ್ನಾಗಿ ಅಳವಡಿಸಿಕೊಳ್ಳಬೇಕಾಗುತ್ತದೆ (ಗುರುಲಿಂಗಯ್ಯ. ಎಂ., ೨೦೦೮:೩೨).

ಹಿಂದುಳಿದ ವರ್ಗಗಳ ಬಗ್ಗೆ ಕಲ್ಪನೆಯು ಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ತಾಂತ್ರಿಕವಾಗಿ ಅರ್ಥೈಸಲಾಯಿತು. ೧೯೧೮ರಲ್ಲಿ ಮೈಸೂರು ಸರ್ಕಾರ, ಹಿಂದುಳಿದ ಸಮುದಾಯಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮತ್ತು ಸಾಮಾಜಿಕ ಸೇವೆಯಲ್ಲಿರುವವರನ್ನು ಗುರುತಿಸುವ ಸಲುವಗಿ ಒಂದು ಹಿಂದುಳಿದ ವರ್ಗಗಳ ಸಮಿತಿಯನ್ನು ನೇಮಿಸಲಾಯಿತು. ಇದರ ಒಂದು ಪರಿಣಾಮವಾಗಿ ಬ್ರಾಹ್ಮಣರನ್ನು ಹೊರತುಪಡಿಸಿ ಇತರೆ ಎಲ್ಲಾ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಸಮುದಾಯಗಳೆಂದು ಗುರುತಿಸಲಾಯಿತು. ಅದೇ ರೀತಿ ಹಾರ್ಟಾಗ್ ಸಮಿತಿಯು ಹಿಂದುಳಿದ ವರ್ಗಗಳ ಅಥವಾ ಜಾತಿಗಳನ್ನು ಶೈಕ್ಷಿಣಿಕವಾಗಿ ಹಿಂದುಳಿದ ಸಮುದಾಯಗಳೆಂದೇ ವ್ಯಾಖ್ಯಾನಿಸಿತು. ೧೯೩೦ ಸ್ಟಾರ್ಟ ಸಮಿತಿಯು ಹಿಂದುಳಿದ ವರ್ಗಗಳ ಕಲ್ಪನೆಯ ಪ್ರಶ್ನೆಯನ್ನು ಪರಿಶೀಲಿಸಿ ಡಿಪ್ರಸ್ಸ್ ಡ್ ಕ್ಲಾಸಸ್ ಎಂದರೆ ಕೇವಲ ಅಸ್ಪೃಶ್ಯ ವರ್ಗದವರು ಮತ್ತು ಇತರೆ ದೊಡ್ಡ ಗುಂಪಾದ ಹಿಂದುಳಿದ ವರ್ಗಗಳನ್ನು ಹಿಂದುಳಿದ ವರ್ಗಗಳೆಂದು ಕರೆಯಲಾಯಿತು.

ಸಾಮಾನ್ಯವಾಗಿ, ಹಿಂದುಳಿದ ವರ್ಗಗಳೆಂದರೆ, ಇದು ಒಂದು ಸಾಮಾಜಿಕ ಗುಂಪಾಗಿದ್ದು, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಜಾತಿ ಮತ್ತು ಬುಡಕಟ್ಟುಗಳೇ ಆಗಿರುವುದು.

ದಲಿತ ಮತ್ತು ಹಿಂದುಳಿದ ವರ್ಗಗಳು ಅಂಚೀಕೃತ ಗುಂಪುಗಳಾಗಿದ್ದು, ಸಾಮಾಜಿಕವಾಗಿ ಹೊರತಳ್ಳಲ್ಪಟ್ಟಿವೆ. ಈ ರೀತಿ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳನ್ನು ಸಮಾಜದ ಅಂಚಿಗೆ ತಳ್ಳಿ ಸಮಾಜದ ಮುಖ್ಯವಾಹಿನಿಯಲ್ಲಿ ಮಿಳಿತವಾಗದಂತಹ ಸಮಸ್ಯೆಯನ್ನು ತಂದಿದೆ. ಇದನ್ನು ಭಾರತದ ಸಂದರ್ಭದಲ್ಲಿ ಹೆಚ್ಚಾಗಿ ಕಾಣಬಹುದು. ದಲಿತ ಮತ್ತು ಹಿಂದುಳಿದ ವರ್ಗಗಳು ಭಾರತೀಯ ಜಾತಿ ವ್ಯವಸ್ಥೆಯ ಕೆಳಸ್ಥರದಲ್ಲಿ ಕಂಡುಬರುವುದರಿಂದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿವೆ. ಈ ಹಿಂದುಳಿದಿರುವಿಕೆಯನ್ನು ಕಡಿಮೆಗೊಳಿಸಿ ಸಾಮಾಜಿಕ ಸಂಚಲನೆಯನ್ನು ಹೊಂದಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಸಾಮಾಜಿಕ ಹೊರತಳ್ಳುವಿಕೆಯ ಸುಳಿಗೆ ಸಿಕ್ಕಿ ಅತ್ತ ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳದೇ ಇತ್ತ ಮುಖ್ಯ ಸಮಾಜದಲ್ಲಿ ಸಂಪೂರ್ಣ ಸಮ್ಮಿಳಿತವಾಗದೇ ಅತಂತ್ರ ಸ್ಥಿತಿಯನ್ನು ಅನುಭವಿಸುತ್ತವೆ.. ಹಿಂದುಳಿದ ವರ್ಗಗಳಿಗಿಂತ ದಲಿತ ಸಮುದಾಯವು ಹೆಚ್ಚು ಹೆಚ್ಚು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟಂತಾಗಿದೆ. ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳು ಇಂತಹ ಪರಿಸ್ಥಿತಿಗೆ ಒಳಗಾಗುತ್ತವೆ.

ಈ ರೀತಿಯ ಹೊರತಳ್ಳುವಿಕೆಗೆ ದಲಿತ ಮತ್ತು ಹಿಂದುಳಿದ ವರ್ಗಗಳ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಅಥವಾ ಸ್ಥಿತಿಗತಿಗಳೇ ಮುಖ್ಯ ಕಾರಣ. ಸಾಮಾಜಿಕವಾಗಿ ದಲಿತ ಸಮುದಾಯವು ಹಿಂದುಳಿದಿದ್ದು, ಸಾಕ್ಷರತೆಯೂ ಸಹ ಇವರಲ್ಲಿ ಕಡಿಮೆ ಇದೆ. ದೇಶದ ಸರಾಸರಿ ಸಾಕ್ಷರತೆ ೬೭ ಪ್ರತಿಶತ (೨೦೦೧ರ ಜನಗಣತಿಯ ಪ್ರಕಾರ) ಇರುವಾಗ ಪರಿಶಿಷ್ಟ ಜಾತಿಯ ಸಾಕ್ಷರತೆ ಶೇಕಡ ೩೭.೪೧ಷ್ಟು ಇರುವುದು ಇವರ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ತೋರಿಸುತ್ತದೆ. ಹಾಗೆಯೇ ಪರಿಶಿಷ್ಟ ಪಂಗಡದ ಸಾಕ್ಷರತೆ ಶೇಕಡ ೨೯.೬೦ರಷ್ಟಿದೆ. ಇನ್ನು ಹಿಂದುಳಿದ ವರ್ಗದವರ ಸಾಕ್ಷರತೆ ಸುಮಾರು ಶೇಕಡ ೫೦ರಷ್ಟಿರುವುದು. ಈ ಸಮುದಾಯಗಳ ಸಾಮಾಜಿಕ ಹೊರತಳ್ಳುವಿಕೆಯನ್ನು ತೋರಿಸುತ್ತದೆ. ಈ ರೀತಿಯ ಶೈಕ್ಷಣಿಕ ಹೊರತಳ್ಳುವಿಕೆಯು ಕೇವಲ ಸಾಕ್ಷರತೆಗೆ ಮಾತ್ರ ಸೀಮಿತವಾಗಿರದೇ ಔಪಚಾರಿಕ ಶಿಕ್ಷಣದಲ್ಲೂ ಈ ಸಮುದಾಯಗಳ ಪ್ರವೇಶ ಕಡಿಮೆ ಮಟ್ಟದಲ್ಲಿದೆ. ಹಾಗೆಯೇ ದಲಿತ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಲ್ಲಿ ಅನುತ್ತೀರ್ಣತೆ ಮತ್ತು ಅಪಮೌಲ್ಯ ಇತರೆ ಸಮುದಾಯಗಳ ವಿದ್ಯಾರ್ಥಿಗಳಿಗಿಂತ ಹೆಚ್ಚು ಎಂದೇ ಹೇಳಬೇಕು.

ಇನ್ನೂ ಆರ್ಥಿಕ ಸ್ಥಿತಿಗಳಲ್ಲಿ ಆಧುನಿಕ ಉದ್ಯೋಗಗಳು ಮುಖ್ಯ ಪಾತ್ರ ವಹಿಸುತ್ತವೆ. ಆಧುನಿಕ ಉದ್ಯೋಗಗಳು ಹೊರತಳ್ಳುವಿಕೆಯನ್ನು ಕಡಿಮೆ ಮಾಡುತ್ತವೆಯಾದರೂ, ಅಂಚೀಕೃತ ಗುಂಪುಗಳಾದ ದಲಿತ ಮತ್ತು ಹಿಂದುಳಿದ ವರ್ಗಗಳ ಪಾಲಿಗೆ ಕೈಗೆ ಸಿಗದಂತಹ ಉದ್ಯೋಗಗಳಾಗಿವೆ. ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಹುದ್ದೆಗಳಲ್ಲಿ ಈ ಸಮುದಾಯದವರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವುದು ಅವರ ಸಂಖ್ಯೆಯನ್ನು ನೋಡಿದರೆ ತಿಳಿಯುತ್ತದೆ. ಒಂದು ವರದಿಯ ಪ್ರಕಾರ ಕೇಂದ್ರ ಸರ್ಕಾರ ಹುದ್ದೆಗಳಲ್ಲಿ ದಲಿತ ಸಮುದಾಯದವರ ಪ್ರಾತಿನಿಧ್ಯ ಶೇಕಡ ೧೭ರಷ್ಟಿರುವುದು ಕಂಡುಬರುತ್ತದೆ. ಆದರೆ, ಇದು ಎಲ್ಲಾ ರೀತಿಯ ಹುದ್ದೆಗಳನ್ನು ಒಳಗೊಂಡಿರುತ್ತದೆ. ಇವುಗಳಲ್ಲಿ 'ಡಿ' ಗುಂಪಿನ ಹುದ್ದೆಗಳೇ ಹೆಚ್ಚಿರುವುದರಿಂದ ಕೇವಲ ೨ ಅಥವಾ ೩ ಪ್ರತಿಶತದಷ್ಟು 'ಎ' ಮತ್ತು 'ಬಿ' ದರ್ಜೆಯ ಹುದ್ದೆಗಳಲ್ಲಿ ಈ ಸಮುದಾಯದವರು ಇರುವುದು ಕಂಡುಬರುತ್ತದೆ. ಇದೇ ರೀತಿಯ ಪರಿಸ್ಥಿತಿಯು ಹಿಂದುಳಿದ ವರ್ಗಗಳಿಗೂ ಅನ್ವಯಿಸುತ್ತದೆ. ಆದರೆ ಇತ್ತೀಚೆಗೆ ಉದ್ಯೋಗದಲ್ಲಿನ ಮೀಸಲಾತಿಯಿಂದಾಗಿ ಸ್ವಲ್ಪಮಟ್ಟಿನ ಉದ್ಯೋಗದಲ್ಲಿ ಸಾಮಾಜಿಕ ಚಲನೆ ಕಂಡುಬರುತ್ತದೆ.

ಆರ್ಥಿಕ ಸ್ಥಿತಿಗತಿಯನ್ನು ಸೂಚಿಸುವ ಮತ್ತೊಂದು ಸೂಚಕವೆಂದರೆ ಭೂಮಿ. ಹಿಂದಿನಿಂದಲೂ ಭಾರತೀಯ ಸಮಾಜದಲ್ಲಿ ಭೂ ಅಸಮಾನತೆ ಕಂಡುಬರುತ್ತಲಿದೆ. ಅಂದರೆ ಭೂಮಿ ಒಂದು ಮುಖ್ಯವಾದ ಸಂಪತ್ತಿನ ಮೂಲವಾಗಿದ್ದರೂ ಇದು ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ಕೆಲವೇ ಕೆಲವು ಜಮೀನ್ದಾರಿ ಕುಟುಂಬಗಳು ಭೂ ಒಡೆಯರಾಗಿ ಆರ್ಥಿಕ ಸಂಪತ್ತನ್ನು ಅನುಭವಿಸುತ್ತಾ ಬಂದಿವೆ. ಸರ್ಕಾರ, ಭೂಮಿತಿ, ಭೂಸುಧಾರಣೆಗೆ ಸಂಬಂಧಪಟ್ಟಂತೆ ಹಲವಾರು ಕಾನೂನುಗಳನ್ನು ಜಾರಿಗೆ ತಂದರೂ ಮತ್ತು ಭೂದಾನದಂತಹ ಚಳುವಳಿಗಳೂ ನಮ್ಮಲ್ಲಿ ನಡೆದರೂ ದಲಿತ ಮತ್ತು ಅತ್ಯಂತ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಇವತ್ತಿಗೂ ಭೂಮಿ ಇಲ್ಲದಿರುವುದು ಕಂಡುಬರುತ್ತದೆ. ಒಂದು ವೇಳೆ ಗ್ರಾಮೀಣ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಭೂಮಿ ಇರುವವರೂ ಕಂಡುಬಂದರೂ, ಅವರು ಸಣ್ಣ ರೈತರು, ಇಲ್ಲವೇ, ಅತಿ ಸಣ್ಣ ರೈತರೇ ಆಗಿರುತ್ತಾರೆ. ಅಂದರೆ ಬಹುತೇಕ ದಲಿತ ಮತ್ತು ಹಿಂದುಳಿದ ಸಮುದಾಯದವರು ಸಣ್ಣ ಮತ್ತು ಅತೀ ಸಣ್ಣ ರೈತರೇ ಹೆಚ್ಚಾಗಿದ್ದಾಎ ಎಂದರೆ ತಪ್ಪಾಗಲಾರದು. ೧೯೯೨ರಲ್ಲಿ ನಡೆದ ರಾಷ್ಟ್ರೀಯ ಮಾದರಿ ಸಮೀಕ್ಷೆಯು ಪರಿಶಿಷ್ಟ ಜಾತಿ ಮತ್ತು ಪಂಗಡದ ಶೇಕಡ ೩೩.೭ರಷ್ಟು ಗ್ರಾಮೀಣ ಕುಟುಂಬಗಳು ಶೇಕಡ ೯೪ರಷ್ಟು ಭೂಮಿ ಇಲ್ಲದ ಕುಟುಂಬಗಳಾಗಿದ್ದವು ಎಂದು ಹೇಳಿದೆ. ಇನ್ನೊಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿ ೮೩.೨೨ರಷ್ಟು ದಲಿತ ಸಮುದಾಯದ ಕುಟುಂಬಗಳು (ಸ್ವಲ್ಪ ಭೂಮಿ ಇರುವವರು) ಕೇವಲ ಒಣಭೂಮಿಯನ್ನು ಹೊಂದಿರುವುದು ಕಂಡುಬರುತ್ತದೆ. ಅಂದರೆ ಶೇಕಡ ೩೦ ಇಲ್ಲವೇ ೪೦ ಪ್ರತಿಶತ ದಲಿತ ಕುಟುಂಬಗಳು ಸಣ್ಣ ಪ್ರಮಾಣದ ಭೂ ಹಿಡುವಳಿಯನ್ನು ಹೊಂದಿದ್ದಾಗ್ಯೂ ಆ ಭೂಮಿಯು ಬಂಜರು ಇಲ್ಲವೇ ಒಣಭೂಮಿಯಾಗಿರುವುದರಿಂದ ಸಾಗುವಳಿ ಮಾಡಲು ಯೋಗ್ಯವಾಗಿರುವುದಿಲ್ಲ. ಇದರಿಂದ ಇವರಿಗೆ ಕೃಷಿಯಿಂದ ಯಾವುದೇ ಉಪಯೋಗವಾಗದೇ ಭೂರಹಿತ ಕೃಷಿ ಕಾರ್ಮಿಕರಾಗಿಯೇ ಉಳಿದಿದ್ದಾರೆ. ಇವರು ಶೈಕ್ಷಣಿಕ ಹಿಂದುಳಿದಿರುವಿಕೆಯಿಂದಾಗಿ ಆಧುನಿಕ ಹುದ್ದೆಗಳಲ್ಲಿ ಕಡಿಮೆ ಪ್ರಾತಿನಿಧ್ಯ ಹೊಂದಿದ್ದಾರೆ, ಅಂದರೆ ಇನ್ನೂ ಜಾತಿ ಆಧಾರಿತ ಹುದ್ದೆಗಳಲ್ಲಿ ಮುಂದುವರಿಕೆ, ಮತ್ತು ಭೂಮಿ ಇಲ್ಲದಿರುವುದು ಇವರನ್ನು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ (Socially Excluded) ಗುಂಪುಗಳನ್ನಾಗಿ ಮಾಡಿದೆ. ಇವರ ಆರ್ಥಿಕ ಮತ್ತು ಸಾಮಾಜಿಕ ಹೊರತಳ್ಳುವಿಕೆಯು ಅಂಚೀಕರಣಕ್ಕೆ ಅನುವು ಮಾಡಿಕೊಟ್ಟು ಅಂಚೀಕೃತ ಗುಂಪುಗಳಾಗಿ ಉಳಿಯುವಂತೆ ಮಾಡಿದೆ.

ಈ ಹೊರತಳ್ಳುವಿಕೆಯ ಪ್ರಕ್ರಿಯೆಯಿಂದಾಗಿ ಇವರು ಇನ್ನೂ ಮುಖ್ಯ ಸಮಾಜದಲ್ಲಿ ಮಿಳಿತವಾಗಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**ಒಳಗೊಳ್ಳುವಿಕೆಯ ಪ್ರಯತ್ನಗಳು**

ದಲಿತ ಮತ್ತು ಹಿಂದುಳಿದ ವರ್ಗಗಳಾದ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳ ಅಭ್ಯುದಯಕ್ಕಾಗಿ ಹಲವು ಪ್ರಯತ್ನಗಳು ಸ್ವತಂತ್ರ ಪೂರ್ವ ಮತ್ತು ನಂತರದ ದಿನಗಳಲ್ಲಿ ನಡೆದಿರುವುದನ್ನು ನೋಡಬಹುದಾಗಿದೆ. ಸ್ವತಂತ್ರ ಪೂರ್ವದಲ್ಲಿ ನಮ್ಮಲ್ಲಿ ಸಂವಿಧಾನದತ್ತವಾದ ಅವಕಾಶಗಳು ಇದ್ದಿಲ್ಲವಾದ್ದರಿಂದ ಕೆಲವು ಮಹಾನ್ ವ್ಯಕ್ತಿಗಳು ಮತ್ತು ಸಂಸ್ಥೆಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳ ಅಭ್ಯುದಯಕ್ಕೆ ಪ್ರಯತ್ನಪಟ್ಟಿವೆ. ಅಂತಹ ವ್ಯಕ್ತಿಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ರವರು ಮುಖ್ಯವಾಗಿರುತ್ತಾರೆ. ಇವರು ದಲಿತ, ಹಿಂದುಳಿದ ಮತ್ತು ಮಹಿಳೆಯರ ಅಭ್ಯುದಯಕ್ಕಾಗಿ ಅಂದೇ ಆಲೋಚಿಸಿ ಸಂವಿಧಾನವನ್ನು ರಚಿಸಿರುವುದನ್ನು ನಾವು ನೋಡಬಹುದಾಗಿದೆ. ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಸಮುದಾಯಗಳ ಉದ್ಧಾರಕ್ಕೆ ಹಲವು ತೆರನಾದ ಹೋರಾಟ, ಚಿಂತನೆ ಮತ್ತು ಪ್ರಯತ್ನಗಳನ್ನು ಮಾಡಿ ಸಮಸ್ಯೆಗಳ ನಿವಾರಣೆಗೆ ಮತ್ತು ಸಾಮಾಜಿಕ ಚಲನೆಗೆ ಅನುವು ಮಾಡಿಕೊಡುವ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದುದ್ದನ್ನು ನೋಡಬಹುದು. ಪೆರಿಯಾರ, ಫುಲೆ, ಲೋಹಿಯಾ, ಬಸವಣ್ಣ ಮುಂತಾದ ಮಹಾನ್ ವ್ಯಕ್ತಿಗಳು ಜಾತಿ ವ್ಯವಸ್ಥೆಯಲ್ಲಿರುವ ಅಸಮಾನತೆ ಮತ್ತು ಏಣಿ-ಶ್ರೇಣಿಯನ್ನು ಹೋಗಲಾಡಿಸಿ ಹೊರತಳ್ಳಲ್ಪಟ್ಟ ಸಮುದಾಯಗಳ ಏಳಿಗೆಗೆ ಶ್ರಮಿಸಿರುವುದನ್ನು ನಾವು ನೋಡಬಹುದಾಗಿದೆ. ಅಲ್ಲದೆ ಸ್ವತಂತ್ರ ನಂತರದಲ್ಲಿ ಅಸ್ತಿತ್ವಕ್ಕೆ ಬಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಸಮಿತಿ ಮತ್ತು ಆಯೋಗಗಳನ್ನು ನೇಮಿಸಿ, ಅಂಚೀಕೃತ ಸಮುದಾಯಗಳ ಜನರ ಸಮಸ್ಯೆಗಳ ವೈಜ್ಞಾನಿಕ ಅಧ್ಯಯನ ನಡೆಸಿ, ಈ ಸಮುದಾಯಗಳ ಅಭಿವೃದ್ಧಿಗೆ ಹಲವು ರೀತಿಯ ಶಿಫಾರಸ್ಸುಗಳನ್ನು ಮಾಡುವುದರ ಮೂಲಕ ಅಭಿವೃದ್ಧಿ ಹೊಂದುವಂತೆ ಮಾಡುತ್ತಿರುವ ಪ್ರಕ್ರಿಯೆಯನ್ನು ನೋಡಬಹುದಾಗಿದೆ. ಆದರೂ ಇಂದಿಗೂ ದಲಿತ ಮತ್ತು ಹಿಂದುಳಿದ ವರ್ಗಗಳು ಸಮಾಜದಿಂದ ಹೊರತಳ್ಳಲ್ಪಟ್ಟ ಗುಂಪುಗಳಾಗಿಯೇ ಉಳಿದಿವೆ.

**ಸಾಮಾಜಿಕ ಹೊರತಳ್ಳುವಿಕೆ ಮತ್ತು ಬುಡಕಟ್ಟುಗಳು**

ಸಾಮಾನ್ಯವಾಗಿ ಒಂದು ಪ್ರದೇಶದ ಮೂಲ ವಾಸಸ್ಥರನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಬುಡಕಟ್ಟು ಎಂಬ ಪದವನ್ನು ಪ್ರಪಂಚದ ಅತ್ಯಂತ ಅನಾಗರಿಕ ಮತ್ತು ಹಿಂದುಳಿದವ ಎಂಬುದನ್ನು ಸೂಚಿಸಲು ಬಳಸುತ್ತಾರೆ. ನಾಗರಿಕ ಸಮಾಜದಿಂದ ದೂರವಿದ್ದು, ದಟ್ಟವಾದ ಕಾಡುಗಳ ಮಧ್ಯದಲ್ಲಿ ವಾಸಿಸುವ ಜನರಿಗೆ ಸಾಮಾನ್ಯ ಅರ್ಥದಲ್ಲಿ ಬುಡಕಟ್ಟುಗಳೆಂದು ಕರೆಯುತ್ತಾರೆ. ಇವರನ್ನು ಅಲೆಮಾರಿ ಜನಾಂಘ, ಅನಾಗರಿಕರು, ಅರಣ್ಯವಾಸಿಗಳು, ಗಿರಿಜನರು, ಸರ್ವ ಚೇತನವಾದಿಗಳು, ಹಿಂದುಳಿದ ಹಿಂದುಗಳೂ ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇವರು ಆಧುನಿಕ ನಾಗರಿಕತೆಯಿಂದ ಹಲವು ಶತಮಾನಗಳಷ್ಟು ಕಾಲ ಹಿಂದುಳಿದವರಾಗಿದ್ದಾರೆ. ಸಾಮಾನ್ಯವಾಗಿ ಒಬ್ಬ ನಾಯಕನ ಅಧೀನದಲ್ಲಿ ಒಟ್ಟಾಗಿ ಬಾಳುವ ನಾಗರಿಕತೆಯ ಪ್ರಭಾವ ಇಲ್ಲದ ಜನರ ಅಥವಾ ಕುಟುಂಬಗಳ ತಂಡವನ್ನು ಬುಡಕಟ್ಟು ಎಂದು ಕರೆಯಬಹುದು. ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಬುಡಕಟ್ಟಿನ ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ. ಸಮಾಜಶಾಸ್ತ್ರಜ್ಞ ಪ್ರೊ.ಜಿ.ಎಸ್.ಘುರ್ರೆಯವರು ಆದಿವಾಸಿಗಳನ್ನು, "ಹಿಂದುಳಿದ ಹಿಂದುಗಳು" ಎಂದು ಕರೆದರೆ, ಗಾಂಧೀಜಿಯವರು ಇವರನ್ನು "ಗಿರಿಜನರು" ಎಂದು ಕರೆದಿದ್ದಾರೆ. ಆದಿವಾಸಿ ಎಂಬ ಪದವನ್ನು ಭಾರತದ ಅತ್ಯಂತ ಅನಾಗರಿಕ ಹಾಗೂ ಹಿಂದುಳಿದ ಬಣವನ್ನು ಮತ್ತು ಈ ದೇಶದ ಜನರಲ್ಲಿ ಅತ್ಯಂತ ಪ್ರಾಚೀನ ಹಾಗೂ ಮೊದಲ ನಿವಾಸಿಗಳು ಎಂಬುದನ್ನು ಸೂಚಿಸುವುದಕ್ಕೆ ಬಳಸಲಾಗಿದೆ (ನಂಜಮ್ಮಣ್ಣಿ ೧೯೮೨-೧೯೮). ರಿವರ್ಸರವರ ಪ್ರಕಾರ "ಸರಳ ಸಾಮಾಜಿಕ ಗುಂಪಿನಿಂದ ಕೂಡಿದ ಸಾಮಾನ್ಯ ಭಾಷೆಯನ್ನು ಮಾತನಾಡುವ, ಯುದ್ಧದಲ್ಲಿ ಒಟ್ಟಿಗೆ ಕೆಲಸ ಮಾಡುವ ಮತ್ತು ಸಾಮಾನ್ಯ ಕೆಲಸಗಳಲ್ಲಿ ತೊಡಗುವ ಜನರಿಗೆ ಆದಿವಾಸಿ ಜನ"ರೆಂದು ಕರೆದಿದ್ದಾರೆ (ಗುರುಲಿಂಗಯ್ಯ. ಎಂ., ೨೦೦೪:೨).

ಡಿ.ಎನ್. ಮಜುಂದಾರ್ ರವರ ಪ್ರಕಾರ "ಸಾಮಾನ್ಯವಾದ ನಾಮಾಂಕಿತವನ್ನು ಹೊಂದಿರುವ, ಸದಸ್ಯರು ಒಂದೇ ಭೌಗೋಳಿಕ ನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನು ಮಾತನಾಡುವ ಹಾಗೂ ಉದ್ಯೋಗ ಮತ್ತು ವಿವಾಹಕ್ಕೆ ಸಂಬಂಧಿಸಿದ ಕೆಲವು ನಿಷಿದ್ಧಗಳನ್ನು

ಪಾಲಿಸುವ ಕುಟುಂಬಗಳ ಸಮೂಹವೇ ಬುಡಕಟ್ಟು" ಎಂದು ಕರೆದಿದ್ದಾರೆ. ಎಸ್.ಎಫ್.ನಾಡಲ್‌ರವರು "ಭಾಷೆ, ಸಂಸ್ಕೃತಿ ಮತ್ತು ರಾಜಕೀಯರ ಎಲ್ಲೆಯನ್ನು ಹೊಂದಿರುವ ಸಮಾಜವನ್ನು ಬುಡಕಟ್ಟು" ಎಂದು ಕರೆದಿದ್ದಾರೆ.

ಬುಡಕಟ್ಟುಗಳೆಂದರೆ ಯಾರು ಎಂಬುದಕ್ಕೆ "ಭಾರತದ ಇಂಪೀರಿಯರ್ ಗೆಜೆಟಿಯರ್, ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸ ಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ, ಪೂರ್ವದಲ್ಲಿ ಒಳಪಂಗಡ, ವಿವಾಹ ಪದ್ಧತಿಗೆ ಬದ್ಧವಾಗಿದ್ದರಿಬಹುದಾದರೂ, ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಬುಡಕಟ್ಟು ಸಮಾಜ ಅಥವಾ ಆದಿವಾಸಿ ಸಮಾಜ" ಎನ್ನಬಹುದು.

ವಿಶಾಲ ಅರ್ಥದಲ್ಲಿ ಹೇಳುವುದಾದರೆ "ಒಂದು ಸಾಮಾನ್ಯ ಭೌಗೋಳಿಕ ಪ್ರದೇಶದಲ್ಲಿ ವಾಸವಿದ್ದು, ಒಂದೇ ತೆರನಾದ ಭಾಷೆಯನ್ನು ಮಾತನಾಡುವ ಮತ್ತು ಒಂದೇ ತೆರನಾದ ಸಂಸ್ಕೃತಿ ಅಥವಾ ಆಚರಣೆಗಳನ್ನು ಹೊಂದಿರುವ ಜನಾಂಗವನ್ನು ಆದಿವಾಸಿ ಅಥವಾ ಬುಡಕಟ್ಟು ಜನಾಂಗ"ವೆಂದು ಹೇಳಬಹುದು. ಒಟ್ಟಾರೆ ಒಂದು ದೇಶದ ಮೂಲ ನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವ ಜನರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗುತ್ತಿದೆ. "ಭಾರತ ಸಂವಿಧಾನದ ೩೪೨ನೇ ಕಲಮಿನಲ್ಲಿ ಆದಿವಾಸಿಗಳನ್ನು ಪರಶಿಷ್ಟ ಬುಡಕಟ್ಟುಗಳು ಎಂದು ಉಲ್ಲೇಖಿಸಿ ಸಂವಿಧಾನವು ೪೭೨ ಪರಿಶಿಷಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದೆ".

ಬುಡಕಟ್ಟು ಸಮುದಾಯಗಳ ಬಗ್ಗೆ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಅಧ್ಯಯನ ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಎಡ್ಗರ್ ಥರ್ಸ್ಟನ್ ಮತ್ತು ರಂಗಾಚಾರಿ.ಕೆ.(೧೯೦೯), ಎ.ಎ.ಡಿ.ಲೂಯಿಸ್ (೧೯೬೩), ಮಜುಂದಾರ್(೧೯೫೦), ನಾಡಲ್(೧೯೪೭), ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್(೧೯೨೬) ನಿರ್ ಮಲ್ ಕುಮಾರ್ ಬೋಸ್(೧೯೪೭),ಎಲ್‌ವಿನ್ ವೆರಿಯರ್ ಫುರ್ರೆ (೧೯೫೯) ಇವರು ಬುಡಕಟ್ಟುಗಳ ಬಗ್ಗೆ ಸಂಶೋಧನೆ ಕೈಗೊಂಡು ಉತ್ತಮ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಯುವ ವಿದ್ವಾಂಸರು ಬುಡಕಟಟು ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದು, ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವಿಧ ಮಗ್ಗಲುಗಳನ್ನು ಕೂಲಂಕುಷವಾಗಿ ಅಧ್ಯಯನ ನಡೆಸಿ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ (ಗುರುಲಿಂಗಯ್ಯ. ಎಂ. ೨೦೦೪:೪).

ಬುಡಕಟ್ಟು ಜನರು ತಮ್ಮದೇ ಆದ ಅನನ್ಯತೆಯನ್ನು ಹೊಂದಿದ್ದು, ಇತರೆ ಜಾತಿ ಜನರಿಗಿಂತ ಮತ್ತು ಗ್ರಾಮ ಹಾಗೂ ನಗರ ಸಂಸ್ಕೃತಿಯಿಂದ ಬೇರೆಯಾಗಿದ್ದಾರೆ. ಭಾರತದ ಬುಡಕಟ್ಟುಗಳು ಭಿನ್ನ ಭಿನ್ನ ಗುಣಲಕ್ಷಣಗಳನ್ನು ಹೊಂದಿವೆ. ನಿರ್ದಿಷ್ಟ ಭೂಪ್ರದೇಶ, ನಿರ್ದಿಷ್ಟ ಹೆಸರು, ಸಾಮಾನ್ಯ ಭಾಷೆ, ಒಳಪಂಗಡ ವಿವಾಹ ಪದ್ಧತಿ, ಒಂದೇ ಸಂಸ್ಕೃತಿ, ಒಂದೇ ಧರ್ಮ, ಒಂದೇ ರೀತಿಯ ರಾಜಕೀಯ ವ್ಯವಸ್ಥೆ ಇವುಗಳು ಬುಡಕಟ್ಟುಗಳ ಲಕ್ಷಣಗಳಾಗಿವೆ.

ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ಆಫ್ರಿಕಾ ದೇಶವನ್ನು ಬಿಟ್ಟರೆ ಭಾರತ ದೇಶವು ಅತ್ಯಂತ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ಎರಡನೇ ದೇಶವಾಗಿದೆ. ೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟು ಜನರು ೬೮ ಮಿಲಿಯನ್ ಇದ್ದಾರೆ. ಅಂದರೆ, ದೇಶದ ಶೇಕಡ ೮.೦೮ರಷ್ಟು ಜನರು ಬುಡಕಟ್ಟು ಜನರಾಗಿದ್ದಾರೆ. ಭಾರತದಲ್ಲಿ ಸುಮಾರು ೬೩೦ಕ್ಕೂ ಹೆಚ್ಚು ಆದಿವಾಸಿ ಬುಡಕಟ್ಟುಗಳಿವೆ. ಇವರು ವಿವಿಧ ಭೌಗೋಳಿಕ ಪ್ರದೇಶ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ. ಈ ಬುಡಕಟ್ಟು ಜನರಲ್ಲಿ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಕಾಣಬಹುದು. ಬೃಹತ್ ಬುಡಕಟ್ಟು ಜನಾಂಗವು ದೇಶಾದ್ಯಂತ ಹರಡಿದ್ದಾರೆ.

೧೯೯೧ರ ಜನಗಣತಿಯ ಪ್ರಕಾರ ಅತ್ಯಂತ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಮಧ್ಯಪ್ರದೇಶದಲ್ಲಿ (೧೫.೪ ಮಿಲಿಯನ್) ಕಂಡುಬರುತ್ತಾರೆ. ತದನಂತರ ಮಹಾರಾಷ್ಟ್ರ(೭.೩ ಮಿಲಿಯನ್), ಒರಿಸ್ಸಾ (೭ ಮಿಲಿಯನ್), ಬಿಹಾರ (೬.೬ ಮಿಲಿಯನ್) ಮತ್ತು ಗುಜರಾತ್ (೬.೧ ಮಿಲಿಯನ್) ರಾಜ್ಯಗಳು ಬರುತ್ತವೆ. ಮಿಜೋರಾಮ್, ನಾಗಾಲ್ಯಾಂಡ್, ಮೇಘಾಲಯ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಲ್ಲು ಬುಡಕಟ್ಟು ಜನರು ಆಯಾ ರಾಷ್ಟ್ರದ ಒಟ್ಟಾರೆ ಜನಸಂಖ್ಯೆಯ ಪ್ರತಿಶತ ಎಂಬತ್ತಕ್ಕಿಂತಲೂ ಅಧಿಕವಾಗಿದ್ದಾರೆ.

ಅತ್ಯಧಿಕ ಬುಡಕಟ್ಟು ಜನರೆಂದರೆ, ಗೊಂಡರು, ಇವರು ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ೪ ಮಿಲಿಯನ್‌ನಷ್ಟಿದ್ದಾರೆ. ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿ ಭಿಲ್‌ರು ೪ ಮಿಲಿಯನ್ ಮತ್ತು ಬಿಹಾರ, ಒರಿಸ್ಸಾ, ಪಶ್ಚಿಮ ಬಂಗಾಳದಲ್ಲಿ ಸಂತಾಲರು ೩ ಮಿಲಿಯನ್‌ನಷ್ಟು ಕಂಡುಬರುತ್ತಾರೆ. ಭಾರತದ ಬಹುತೇಕ ಬುಡಕಟ್ಟು ಜನರು ತಮ್ಮಷ್ಟಕ್ಕೆ ತಾವೇ ತಾವು ಹಿಂದೂಗಳೆಂದು ಘೋಷಿಸಿಕೊಂಡಿದ್ದಾರೆ. ಧರ್ಮದ ಆಧಾರದ ಮೇಲೆ ಬುಡಕಟ್ಟು ಜನರನ್ನು ವಿಂಗಡಿಸುವುದಾದರೆ, ಪ್ರತಿಶತ ೮೯ರಷ್ಟು ಬುಡಕಟ್ಟುಗಳು ಹಿಂದುಗಳು, ೫.೫% ರಾಜ್ಯಕ್ರಿಶ್ಚಿಯನ್‌ರು, ೦.೩%ರಷ್ಟು ಜನರು ಬೌದ್ಧರು, ೦.೨%ರಷ್ಟು ಜನರು ಮುಸಲ್ಮಾನರು, ೫%ರಷ್ಟು ಜನರು ಇತರೆಯವರು ಆಗಿದ್ದಾರೆ.

ಮಾನವಶಾಸ್ತ್ರಜ್ಞರು, ಸಾಮಾಜಿಕ ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಬುಡಕಟ್ಟುಗಳನ್ನು ಅವರು ವಾಸಿಸುವ ಭೂಪ್ರದೇಶಗಳ, ಭಾಷೆಗಳ, ಜನಾಂಗಗಳ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ಎಲ್.ಪಿ. ವಿದ್ಯಾರ್ಥಿಯವರು ಬುಡಕಟ್ಟುಗಳು ವಾಸಿಸುವ ಭೌಗೋಳಿಕ ಪ್ರದೇಶವನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ, (೧) ಹಿಮಾಲಯ ಪ್ರದೇಶ, ೨) ಮಧ್ಯ ಭಾತ, (೩) ಪಶ್ಚಿಮ ಭಾರತ ಮತ್ತು (೪) ದಕ್ಷಿಣ ಭಾರತ.

ಭಾರತದ ಈ ವಲಯಗಳ ಬುಡಕಟ್ಟುಗಳ ಪೈಕಿ ದಕ್ಷಿಣ ವಲಯದ ಬುಡಕಟ್ಟುಗಳು ಅತ್ಯಂತ ಹಿಂದುಳಿದ ಮತ್ತು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಬುಡಕಟ್ಟುಗಳಾಗಿವೆ. ಅಲ್ಲದೇ ಇನ್ನೂ ಪ್ರಾಚೀನ ಸ್ಥಿತಿಯಲ್ಲಿದ್ದಾರೆ ಎಂದರೆ ತಪ್ಪಾಗಲಾರದು. ಇಲ್ಲಿಯ ಬಹುತೇಕ ಬುಡಕಟ್ಟುಗಳು ಅಲೆಮಾರಿ ಜೀವನವನ್ನು ನಡೆಸುತ್ತಾರೆ. ದಕ್ಷಿಣವಲಯದ ಬುಡಕಟ್ಟುಗಳಲ್ಲಿ ಮಾತ್ರ ಪ್ರಧಾನ ಕುಟುಂಬಗಳು ಕಂಡುಬರುತ್ತವೆ. ಈ ವಲಯದಲ್ಲಿ ಕರ್ನಾಟಕದ ಬುಡಕಟ್ಟುಗಳ ವೈವಿಧ್ಯಗಳೊಂದಿಗೆ ಸಾಮ್ಯತೆ ಮತ್ತು ಅನನ್ಯತೆಯ ಲಕ್ಷಣಘಳನ್ನು ಹೊಂದಿವೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಜನರು ಬಯಲು ಸೀಮೆ, ಪಶ್ಚಿಮಘಟ್ಟ, ಕರಾವಳಿ ಮತ್ತು ಮಲೆನಾಡಿನ ತಪ್ಪಲು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ೧೯೯೧ರ ಜನಗಣತಿಯ ಪ್ರಕಾರ ರಾಜ್ಯದ ಬುಡಕಟ್ಟು ಜನಸಂಖ್ಯೆ ೧೯,೧೫,೬೯೧. ಇವರು ರಾಜ್ಯದ ಒಟ್ಟು ಜನಸಂಖ್ಯೆ ಶೇಕಡ ೪.೨೬ರಷ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ ೫೦ ಬುಡಕಟ್ಟುಗಳು ರಾಜ್ಯದಲ್ಲಿ ಇವೆ ಎಂದು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳಿಂದ ತಿಳಿದುಬಂದಿದೆ. ರಾಜ್ಯದಲ್ಲಿ ೧೯೬೧ ಮತ್ತು ೧೯೮೧ರ ನಡುವೆ ಬುಡಕಟ್ಟು ಜನಸಂಖ್ಯೆಯು ಬಹಳ ಹೆಚ್ಚಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ, ಚಿತ್ರದುರ್ಗ, ಕೊಡಗು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಕಂಡುಬಂದರೆ, ನಂತರದ ಸ್ಥಾನ ಬೆಂಗಳೂರು, ಬೆಳಗಾವಿ, ಬೀದರ್, ಬಿಜಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಗುಲಬರ್ಗಾ ಮತ್ತು ಶಿವಮೊಗ್ಗ ಜಿಲ್ಲೆಗಳದ್ದು, ಉತ್ತರ ಕನ್ನಡ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಬುಡಕಟಟು ಜನರ ಸಂಖ್ಯೆ ಆಯಾ ಜಿಲ್ಲೆಯ ಶೇಕಡ ಒಂದರಷ್ಟಿದೆ.

(3)

ರಾಜ್ಯದ ಬುಡಕಟ್ಟುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬುಡಕಟ್ಟುಗಳೆಂದರೆ ನಾಯಕಡ ಅಥವಾ ನಾಯಕ (೬೯%). ಇವರ ನಂತರ ಕಾಡುಕುರುಬರು ಶೇ.೧೧ರಷ್ಟಿದ್ದರೆ, ಮರಾಠಿ ನಾಯಕರು ಶೇಕಡ ನಾಲ್ಕರಷ್ಟಿದ್ದಾರೆ. ಉಳಿದಂತೆ ಗೊಂಡರು ಶೇಕಡ ಮೂರರಷ್ಟು, ಕೋಲಿಡಾರ್, ಜೇನುಕುರುಬ ಮತ್ತು ಕೋಯ ತಲಾ ಶೇ. ಎರಡರಷ್ಟು ಕಂಡುಬರುತ್ತಾರೆ. ಕಡಿಮೆ ಜನಸಂಖ್ಯೆ ರಾಜ್ಯದ ಬುಡಕಟ್ಟುಗಳೆಂದರೆ, ಯರವ, ಮೇದ, ಸೋಲಿಗ, ಮಲೆಕುಡಿಯ ಮತ್ತು ಹಸಲರು, ಇವರ ಪ್ರಮಾಣ ಶೇಕಡ ಒಂದು. ಕೊರಗರ ಜನಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ.

ಬುಡಕಟ್ಟು ಸಮುದಾಯಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿದ್ದು, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಮತ್ತು ರಾಜಕೀಯವಾಗಿ ಹಿಂದುಳಿದ ಅಂಚೀಕೃತ ಸಮುದಾಯಗಳಾಗಿವೆ.

ಬುಡಕಟ್ಟು ಜನರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದವರಾಗಿರುತ್ತಾರೆ. ಇವರಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ ಹತ್ತಕ್ಕಿಂತಲೂ ಕಡಿಮೆ ಇದೆ. ಇವರು ಔಪಚಾರಿಕ ಶಿಕ್ಷಣ ಸಂಸ್ಥೆಗಳಾದ ಶಾಲೆ, ಕಾಲೇಜುಗಳಿಗೆ ಹೋಗುವುದೇ ಕಡಿಮೆ. ಸಾಮಾನ್ಯವಾಗಿ ಬುಡಕಟ್ಟು ಜನರು ತಮ್ಮ ಶಿಕ್ಷಣವನ್ನು ದಿನನಿತ್ಯದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳಿಂದಲೇ ಅನೌಪಚಾರಿಕವಾಗಿ ಪಡೆಯುತ್ತಾರೆ. ಇತ್ತೀಚೆಗೆ ಅಲ್ಲೊಬ್ಬ ಆದಿವಾಸಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿದ್ದಾರೆ.

ಆರ್ಥಿಕ ಹಿಂದುಳಿದಿರುವಿಕೆಯು ಬುಡಕಟ್ಟು ಜನರ ಪ್ರಮುಖ ಲಕ್ಷಣವಾಗಿದೆ. ಬುಡಕಟ್ಟು ಜನರಲ್ಲಿ ಶ್ರೀಮಂತರು ಇಲ್ಲವೇ ಇಲ್ಲ. ಇವರ ಶ್ರೀಮಂತಿಕೆ ನಿರ್ಧಾರವಾಗುವುದು ಇವರ ಸಾಂಸ್ಕೃತಿಕ ಶ್ರೀಮಂತಿಕೆಯಿಂದ. ಬುಡಕಟ್ಟು ಜನರು ಕಾಡುಗಳಲ್ಲಿ ವಾಸಿಸುವುದರಿಂದ ಅನೇಕ ನಾಗರಿಕ ಸವಲತ್ತುಗಳಿಂಥ ವಂಚಿತರಾಗಿದ್ದು, ಇವರಿಗೆ ಯಾವುದೇ ಅಧಿಕ ಆರ್ಥಿಕ ಮೂಲ ಇರುವುದಿಲ್ಲ. ಬುಡಕಟ್ಟು ಜನರು ಭೂರಹಿತ ಜನರಾಗಿದ್ದಾರೆ. ಇವರಿಗೆ ಯಾವುದೇ ಅಧಿಕ ಆರ್ಥಿಕ ಮೂಲ ಇರುವುದಿಲ್ಲ. ಬುಡಕಟ್ಟು ಜನರ ಆರ್ಥಿಕ ಹಿಂದುಳಿದಿರುವಿಕೆ ಇವರ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಭಾರತದಲ್ಲಿ ಶೇಕಡ ಎಂಭತ್ತೈದರಷ್ಟು ಬುಡಕಟ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದರೆ ಆಶ್ಚರ್ಯವಾಗುವುದಾದರೂ ಸತ್ಯ ಸಂಗತಿ.

ಭಾರತದ ಬುಡಕಟ್ಟುಗಳ ಆರ್ಥಿಕತೆ ಸರಳವಾದುದು. ಬಹುತೇಕ ಭಾರತದ ಬುಡಕಟ್ಟುಗಳು ಅರ್ಥಿಕವಾಗಿ ಹಿಂದುಳಿದವುಗಳಾಗಿವೆ. ಬುಡಕಟಟುಗಳ ಪ್ರಾಚೀನ ಆರ್ಥಿಕ ಜೀವನ ಹಣದ ಚಲಾವಣೆಯಿಂದ ಮುಕ್ತವಾಗಿತ್ತು. ಅಲ್ಲಿ ಆರ್ಥಿಕ ಚಟುವಟಿಕೆಗಳು ಸಂಕೀರ್ಣವಾಗಿರದೆ ಸರಳವಾಗಿದ್ದವು. ಅಂತಹ ಸಮಾಜದಲ್ಲಿ ಬುಡಕಟ್ಟು ಜನರು ತಮ್ಮ ಜೀವನ ನಿರ್ವಹಣೆಗೆ ಹಣ್ಣು ಹಂಪಲು, ಗೆಡ್ಡೆ ಗೆಣಸು ಸಂಗ್ರಹಿಸಿ ಮತ್ತು ಮೀನು ಹಿಡಿದು ಬೇಟೆಯಾಡಿ ಜೀವನ ಮಾಡುತ್ತಿದ್ದರು. ದವಸ ಧಾನ್ಯಗಳನ್ನು ಬೆಳೆಯದಿದ್ದಂತಹ ಕಾಲದಲ್ಲಿ ಬೇಟೆಯಾಡುವುದು ಮತ್ತು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು ಬುಡಕಟ್ಟುಗಳ ಮುಖ್ಯವಾದ ಕಸುಬುಗಳಾಗಿದ್ದವು. ಕೊಚ್ಚಿನ್ನಿನ ಕಾಡರ್, ಮಲಾಪತ್ರಂ, ಪೆಲಿಯನ್, ಪಣಿಯನ್, ಇರುಳಾ, ತಮಿಳುನಾಡಿನ ಕುರುಂಬ, ಆಂಧ್ರಪ್ರದೇಶದ ಚೆಂಚು, ಬಿಹಾರದ ಬಿರ್ ಹಾರ್' ಮತ್ತು ಕಾರಿಯಂ, ಕಾಮಾರ್, ಬೈಗಾ, ಮಧ್ಯಪ್ರದೇಶದ ಅಹುಜ್ ಮರಿಯಾ ಬುಡಕಟ್ಟುಗಳ ಮೇಲೆ ಹೇಳಿದ ಕಸುಬುಗಳಿಂದ ಜೀವನ ಸಾಗಿಸುತ್ತಿದ್ದರು.

ಕೆಲವು ಭಾರತದ ಬುಡಕಟ್ಟುಗಳು ಸ್ಥಳಾಂತರ ಬೇಸಾಯ ಕ್ರಮವನ್ನು ಅನುಸರಿಸುತ್ತಾರೆ. ಉತ್ತರ ಈಶಾನ್ಯ ವಲಯದ ಲೋತಾ, ಆಗಮನಾಗ, ಖಾಸೀ ಮತ್ತು ಕುಕಿ ಬುಡಕಟ್ಟುಗಳು, ಮಧ್ಯಪ್ರದೇಶದ ಬೈಗಾ ಮತ್ತು ಗೊಂಡಾ ಬುಡಕಟ್ಟುಗಳು ಸ್ಥಳಾಂತರ ಬೇಸಾಯ ಕ್ರಮವನ್ನು ಅನುಸರಿಸುತ್ತಿವೆ. ಈ ರೀತಿಯ ಬೇಸಾಯ ಪದ್ಧತಿಯು ಉತ್ತರ ಈಶಾನ್ಯ ಪ್ರದೇಶ, ಒರಿಸ್ಸಾ, ಮಧ್ಯಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕಂಡುಬರುತ್ತದೆ. ಕೃಷಿಯು ಒಂದು ಮುಖ್ಯವಾದ ಆರ್ಥಿಕ ನಿರ್ವಹಣೆಯ ಕಸುಬಾಗಿದ್ದು, ಬಹುತೇಕ ಭಾರತದ ಬುಡಕಟ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ. ಬುಡಕಟ್ಟು ಜನರು ಸಣ್ಣ ಭೂಹಿಡುವಳಿಗಳನ್ನು ಹೊಂದಿದ್ದು, ತಮ್ಮ ಜೀವನ ನಿರ್ವಹಣೆಗೆ ವ್ಯವಸಾಯವನ್ನು ಅವಲಂಬಿಸಿದ್ದಾರೆ. ಮಿಜೋರಾಂನ ಮಿಜೋಗಳು ಮತ್ತು ಅರುಣಾಚಲ ಪ್ರದೇಶ ಅಪಟಾನಿಗಳು ಸ್ಥಳಾಂತರಿ ಕೃಷಿ ಪದ್ಧತಿಯನ್ನು ಬಿಟ್ಟು ಸಾಮಾನ್ಯ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಉಳಿದಂತೆ ಸಂತಾಲರು, ಒರಾನ್, ಹೋ, ಕೊರವ, ಗೊಂಡಾ, ಭಿಲ್, ಬಿಲಾರ್, ಬಡಗಾ ಮತ್ತು ದಕ್ಷಿಣ ಭಾರತದ ಬಹುತೇಕ ಬುಡಕಟ್ಟುಗಳು ಉತ್ತಮ ಕೃಷಿಕರಾಗಿ ಹೊರಹೊಮ್ಮಿದ್ದಾರೆ.

ಪಶುಪಾಲನೆಯು ಬುಡಕಟ್ಟುಗಳ ಸಾಂಪ್ರದಾಯಿಕ ಕಸುಬು. ಇದು ಬುಡಕಟ್ಟುಗಳ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿದೆ. ನೀಲಗಿರಿಯ ತೋಡರು ಎಮ್ಮೆಗಳನ್ನು ಸಾಕುತ್ತಾರೆ ಮತ್ತು ಪೂಜಿಸುತ್ತಾರೆ. ಹಾಲು ಮತ್ತು ಅದರ ಉತ್ಪನ್ನಗಳನ್ನು ಮಾರಿ ಇವರು ಜೀವನ ನಡೆಸುತ್ತಾರೆ. ಹಾಲು ಮತ್ತು ಅದರ ಉತ್ಪನ್ನಗಳನ್ನು ಮಾರಿ ಇವರು ಜೀವನ ನಡೆಸುತ್ತಾರೆ. ಕರ್ನಾಟಕದ ಕಾಡುಗೊಲ್ಲರು ಪಶುಪಾಲನೆ ಮತ್ತು ಕುರಿ ಸಾಕಣೆಯನ್ನು ತಮ್ಮ ಮುಖ್ಯ ಕುಲಕಸುಬಾಗಿಸಿಕೊಂಡಿದ್ದಾರೆ. ಇತ್ತೀಚೆಗೆ ಇತರೆ ಸಮುದಾಯಗಳ ಜನರ ಸಂಪರ್ಕದಿಂದಾಗಿ ಕುರಿಸಾಕಣೆ ಮತ್ತು ಪಶುಪಾಲನೆ ಕ್ರಮೇಣ ಕಡಿಮೆಯಾಗುತ್ತಿದೆ. ಇದೇ ರೀತಿ ಹಿಮಾಚಲ ಪ್ರದೇಶದ ಗುಜ್ಜಾರರು ದನ, ಎಮ್ಮೆ, ಮತ್ತು ಕುರಿಸಾಕಣೆಯಲ್ಲಿ ಪರಿಣಿತರಾಗಿದ್ದಾರೆ. ಕೆಲವು ಬುಡಕಟ್ಟುಗಳು ಕರಕುಶಲ ಕಲೆಯಲ್ಲಿ ನಿಪುಣರಾಗಿದ್ದು, ತಮ್ಮ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಅಲ್ಲದೇ ತಮ್ಮ ಆರ್ಥಿಕ ಜೀವನಕ್ಕೆ ಇದನ್ನು ಉಪಯೋಗಿಸುತ್ತಾರೆ. ಮರಿಯ ಗೊಂಡಾ, ಸೌರಾಸ್, ಇರುಳಾ ಬುಡಕಟ್ಟು ಜನರು ಬಿದಿರಿನಿಂದ ಬುಟ್ಟಿ ಹೆಣೆಯುವ ಕೆಲಸದಲ್ಲಿ ನಿರತರಾಗಿದ್ದಾರೆ. ಸಂತಾಲರು,

ಗೊಂಡರು ಇನ್ನೂ ಕೆಲವು ಬುಡಕಟ್ಟುಗಳು ಕೈಗಾರಿಕಾ ಕಾರ್ಮಿಕರಾಗಿ ವಿವಿಧ ಪ್ಲಾಂಟೇಷನ್‌ಗಳಲ್ಲಿ ದುಡಿಯುತ್ತಿದ್ದಾರೆ. ಇತ್ತೀಚೆಗೆ ಬುಡಕಟ್ಟುಗಳು, ಆಧುನೀಕರಣದ ಪ್ರಭಾವದಿಂದಾಗಿ ತಮ್ಮ ಬುಡಕಟ್ಟು ಕುಲಕಸುಬುಗಳನ್ನು ಬಿಟ್ಟು ವ್ಯವಸಾಯ ಮತ್ತು ಇತರೆ ಅಸಾಂಪ್ರದಾಯಿಕ ಉದ್ಯೋಗಗಳತ್ತ ವಾಲುತ್ತಿರುವುದನ್ನು ಕಾಣಬಹುದು. ಆದಾಗ್ಯೂ ಬಹುತೇಕ ಭಾರತದ ಬುಡಕಟ್ಟುಗಳು ಇನ್ನೂ ತಮ್ಮ ಸಾಂಪ್ರದಾಯಿಕ ಕಸುಬನ್ನು ಮುಂದುವರೆಸಿಕೊಂಡು ಬರುತ್ತಿರುವುದನ್ನು ಕಾಣಬಹುದು.

ಜಾತಿ ವ್ಯವಸ್ಥೆಯ ಪ್ರಭಾವ, ಅರಣ್ಯ ನಾಶ, ನಗರೀಕರಣ, ಅಭಿವೃದ್ಧಿಯ ನೆಪದಲ್ಲಿ ಬರುವ ಕಾರ್ಯಕ್ರಮಗಳು, ಆಧುನೀಕರಣ ಪ್ರಕ್ರಿಯೆ ಇತ್ಯಾದಿಗಳು ಬುಡಕಟ್ಟುಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿವೆ ಎಂದರೆ ತಪ್ಪಾಗಲಾರದು. ಇಂದು ಬುಡಕಟ್ಟು ಜನರ ವಿವಾಹಕ್ರಮ, ಕುಟುಂಬ ಪದ್ಧತಿ, ಆಹಾರ, ವೇಷಭೂಷಣ, ಕಸುಬು, ಧಾರ್ಮಿಕ ಅಂಶಗಳು ಆಧುನಿಕ ಬದಲಾವಣೆಯ ಗಾಳಿಗೆ ಸಿಲುಕಿ ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುತ್ತಿವೆ. ಇಂದು ಬುಡಕಟ್ಟು ಜನರು ಬುಡಕಟ್ಟು ಜನರಾಗಿ ಉಳಿಯದೆ ಜಾತಿ ವ್ಯವಸ್ಥೆಯ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಈ ಒಂದು ಪ್ರಕ್ರಿಯೆ ಸಂಚಲನೆ ದೃಷ್ಟಿಯಿಂದ ಕನಿಷ್ಟ ಮಟ್ಟಿಗಾದರೂ ಬುಡಕಟಟು ಧರ್ಮ, ಕಲೆ, ಸಂಸ್ಕೃತಿ ಮತ್ತು ಶ್ರೀಮಂತ ಪರಂಪರೆಯನ್ನು ಸಂರಕ್ಷಿಸುವುದು ಈಗಿನ ಆದ್ಯ ಕರ್ತವ್ಯ. ಇಷ್ಟಾದರೂ, ಇಂದಿಗು ಬುಡಕಟ್ಟು ಜನರು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿಯೇ ಉಳಿದಿದ್ದಾರೆ.

**ಸಾಮಾಜಿಕ ಹೊರತಳ್ಳುವಿಕೆ, ಅಲೆಮಾರಿ ಮತ್ತು ಅರೆ–ಅಲೆಮಾರಿ ಸಮುದಾಯಗಳು**

ಭಾರತೀಯ ಸಮುದಾಯಗಳಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳು ಅತ್ಯಂತ ಹೆಚ್ಚಿನ ರೀತಿಯ ಸಾಮಾಜಿಕ ಹೊರತಳ್ಳುವಿಕೆ (Social Exclusion)ಯ ಪ್ರಕ್ರಿಯೆಗೆ ಒಳಗಾಗಿರುವಂತಹವು. ಈ ಸಮುದಾಯಗಳು ಇತರೆ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಸಮುದಾಯಗಳಿಗಿಂತ ಹೆಚ್ಚಿನ ರೀತಿಯ ಅಂಚೀಕೃತಗೊಂಡ ಸಮುದಾಯಗಳಾಗಿವೆ. ಅರೆ-ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಭಾರತೀಯ ಸಮಾಜದ ಭಾಗವಾಗಿದ್ದರೂ, ನೆಲೆ ಇಲ್ಲದೆ, ಯಾವುದೇ ರೀತಿಯ ಅಸ್ತಿತ್ವವಿಲ್ಲದೆ ಮತ್ತು ಯಾವ ರೀತಿಯಿಂದಲೂ ಗುರುತಿಸಲ್ಪಡದ ಸಮುದಾಯಗಳಾಗಿಯೇ ಉಳಿದು ಸಮಾಜದಿಂದ ಹೊರತಳ್ಳಲ್ಪಟ್ಟ (Socially Excluded) ಗುಂಪುಗಳಾಗಿಯೇ ಉಳಿದಿದೆ. ದೇಶಾದ್ಯಂತ ಸುಮಾರು ೧೨ ಕೋಟಿಗೂ ಹೆಚ್ಚಿರುವ ಈ ಸಮುದಾಯಗಳು ಎಲ್ಲಾ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳು, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳಾಗಿದ್ದು, ಸಮಾನಪದದಿಂದಲೂ ನಿರಾಕರಣೆಗೆ ಒಳಗಾದಂತಹ ಗುಂಪುಗಳಾಗಿವೆ.

**ಪರಿಕಲ್ಪನೆ**

ಮಾನವ ಶಾಸ್ತ್ರಜ್ಞರು ಪ್ರಾರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯುಳ್ಳವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದರು. ಎನ್‌ಸೈಕ್ಲೋಪೀಡಿಯಾ ಆಫ್ ಬ್ರಿಟಾನಿಕಾದ ಪ್ರಕಾಖ ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ, ದಿಕ್ಕು ದೆಸೆಯಿಲ್ಲದೆ ಅಥವಾ ಕಾಲಾನುಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ ಎಂದು ಅರ್ಥೈಸಿದೆ. ಇದು ವಲಸೆ ಪ್ರಕ್ರಿಯೆಗಿಂತ ಅತ್ಯಂತ ಭಿನ್ನವಾದುದಾಗಿದೆ.

ಪಶುಪಾಲನೆ ಅಥವಾ ಇತರೆ ಕಸುಬುಗಳ ಹಿನ್ನೆಲೆಯ ಸಮುದಾಯಗಳು ಕಾಲಾಂತರದಲ್ಲಿ ಅಲ್ಲಲ್ಲಿ ಸ್ಥಾಯಿಯಾಗಿ ನೆಲೆನಿಂತರೂ ಪಶು ಸಂಗೋಪನೆಗಾಗಿ ಅಥವಾ ಇತರೆ ಕಸುಬುಗಳ ನಿರ್ವಹಣೆಗಾಗಿ ಅಲೆಮಾರಿತನ ಅನಿವಾರ್ಯವಾಗಿ ಮುಂದುವರಿಸುವವರು. ಇಂತಹ ಸಮುದಾಯಗಳನ್ನು ಅರೆ-ಅಲೆಮಾರಿ ಸಮುದಾಯ (Semi-Nomadic) ಗಳೆಂದು ಕರೆಯುತ್ತಾರೆ.

ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಮರಾಠಿಯಲ್ಲಿ ಭಟಕ್ಯಾ, ಹಿಂದಿಯಲ್ಲಿ ಸಂಚಾರಿ, ಘುಮಾಂತು, ಗ್ರೀಕಿನಲ್ಲಿ ಮೆಮಿನ್ (Memein), ಲ್ಯಾಟಿನ್ ನಲ್ಲಿ ನೋಮಾಸ್ (Nomas), ಇಂಗ್ಲೀಷ್‌ನಲ್ಲಿ ನೋಮ್ಯಾಡ್(Nomad) ಜೊತೆಗೆ ಪರದೇಶಿ, ನೆಲೆಯಿಲ್ಲದವರು, ದೇಶಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು ಎಂಬ ಇತ್ಯಾದಿ ಹೆಸರುಗಳಿಂದಲೂ ಕರೆಯುತ್ತಾರೆ.

ಅಲೆಮಾರಿ ಹಾಗೂ ಅರೆ-ಅಲೆಮಾರಿ ಬುಡಕಟ್ಟುಗಳಿಗೆ ಭಾರತ ಸರ್ಕಾರ ಅಧಿಕೃತವಾಗಿ ಯಾವ ವ್ಯಾಖ್ಯಾನವನ್ನು ನೀಡಿಲ್ಲ. ೧೯೩೧ರ ಭಾರತದ ಜನಗಣತಿಯಲ್ಲಿ ಮಾಡಲಾದ ಅಲೆಮಾರಿ ಬುಡಕಟ್ಟುಗಳ ಪಟ್ಟಿಯನ್ನು ಮಾತ್ರ ವಿಶ್ವಾಸನೀಯ ದಾಖಲೆ ಎಂದು ಹೇಳಬಹುದು. ೧೯೩೧ರ ಜನಗಣತಿಯಲ್ಲಿ ಅಲೆಮಾರಿ ಹಾಗೂ ಅರೆ-ಅಲೆಮಾರಿ ಬುಡಕಟ್ಟು ಹಾಗೂ ಸಮುದಾಯಗಳನ್ನು ಗುರುತಿಸಿ ದಾಖಲಿಸಲಾಗಿದೆ. ಇವುಗಳು ಭಾರತದ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಇರುವುದಾದರೆ ಅವುಗಳನ್ನೇ ಅಲೆಮಾರಿ ಅಥವಾ ಅರೆಅಲೆಮಾರಿ ಸಮುದಾಯಗಳೆಂದು ಗುರುತಿಸಬಹುದು.

ಸಾಮಾನ್ಯವಾಗಿ ಅಲೆಮಾರಿ ಮತ್ತು ಅರೆ-ಅಲೆಮಾರಿಗಳೆಂದರೆ -ಯಾರು, ತಮ್ಮ ದಿನನಿತ್ಯದ ಆಹಾರಕ್ಕಾಗಿ ಹಾಗೂ ತಮ್ಮ ಪಶು-ಪ್ರಾಣಿಗಳಿಗೆ ಆಹಾರಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಗಳಿಗೆ ಸ್ಥಳಾಂತರಗೊಂಡು ಶಾಶ್ವತ ನೆಲೆಯಿಲ್ಲದೆ ಕಷ್ಟ ಜೀವನವನ್ನು ನಡೆಸುತ್ತಿದ್ದಾರೋ ಅವರನ್ನು ಅಲೆಮಾರಿಗಳೆಂದು ಕರೆಯಬಹುದಾಗಿದೆ. ಮತ್ತೊಂದು ಅರ್ಥದಲ್ಲಿ ಅಲೆಮಾರಿತನವನ್ನು ಈ ರೀತಿ ವ್ಯಾಖ್ಯಾನಿಸಬಹುದು. "ಪಶುಪಾಲನೆ, ಕೃಷಿ, ಅಥವಾ ವ್ಯಾಪಾರ ಮತ್ತು ವಾಣಿಜ್ಯ ಇವುಗಳ ಆಧಾರದ ಮೇಲೆ ಆರ್ಥಿಕತೆಯಿಂದ ಕೂಡಿದ ಭೌತಿಕ ಚಲನೆಗೆ ಅಲೆಮಾರಿತನ ಎನ್ನಬಹುದು. (Physical movement combined with economics based on pastoralism, foraging, agriculture or trade).

ಅಲೆಮಾರಿ ಸಮುದಾಯಗಳನ್ನು ಸಾಮಾನ್ಯವಾಗಿ ಪಶುಪಾಲನಾ ವೃತ್ತಿಯ ಅಲೆಮಾರಿಗಳು, ಬೇಟೆ ಮತ್ತು ಆಹಾರ ಸಂಗ್ರಹಿಸುವ ಅಲೆಮಾರಿಗಳು ಮತ್ತು ಊರೂರು ತಿರುಗುವ ಅಲೆಮಾರಿಗಳು ಎಂಬುದಾಗಿ ವಿಂಗಡಿಸಬಹುದಾಗಿದೆ.

ಇಡೀ ವಿಶ್ವದಾದ್ಯಂತ ಅಲೆಮಾರಿ ಸಮುದಾಯಗಳು ಹಂಚಿಹೋಗಿದ್ದಾರೆ. ವಿಶ್ವಸಂಸ್ಥೆಯ ಇತ್ತೀಚಿನ ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಶೇಕಡ ೨೦ರಷ್ಟು ಜನ ಅಲೆಮಾರಿ ಗುಂಪುಗಳಿಗೆ ಸೇರಿದ್ದವರಾಗಿದ್ದಾರೆ ಎಂಬುದಾಗಿ ತಿಳಿದುಬಂದಿದೆ. ರಾಷ್ಟ್ರೀಯ ಅಲೆಮಾರಿ ಮತ್ತು ಅರೆ-ಅಲೆಮಾರಿ ಆಯೋಗದ ಪ್ರಕಾರ ಭಾರತದ ೨೩ ರಾಜ್ಯಗಳಲ್ಲಿ ಮತ್ತು ೫ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ೭೪೯ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳಿವೆ. ಪ್ರಸ್ತುತ ಭಾರತದಲ್ಲಿ ಇವುಗಳ ಒಟ್ಟು ಜನಸಂಖ್ಯೆ ಸುಮರು ೧೨ ಕೋಟಿಯನ್ನು ಮೀರಿದೆ. ಅಂದರೆ, ಭಾರತದ ಒಟ್ಟು ಜನಸಂಖ್ಯೆಯ ಶೇಕಡ ೧೨ರಷ್ಟು ಜನ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಅತ್ಯಧಿಕ ಅಂದರೆ ೭೩ ಅಲೆಮಾರಿ ಸಮುದಾಯಗಳು ಗುರುತಿಸಲ್ಪಟ್ಟರೆ, ಎರಡನೇ ರಾಜ್ಯ ಕರ್ನಾಟಕದಲ್ಲಿ ೫೭ ಸಮುದಾಯಗಳು ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳೆಂದು ಕರೆಯಲ್ಪಟ್ಟಿವೆ.

ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಸಮುದಾಯಗಳಾಗಿ ಗುರುತಿಸಿಕೊಳ್ಳುತ್ತಾರೆ. ಈ ಸಮುದಾಯಗಳು ಬೇರೆ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಂಡಿವೆ. ಕೆಲವು ಸಮುದಾಯಗಳು ಪಶುಪಾಲನೆಯ ವೃತ್ತಿಯನ್ನು ಮುಂದುವರಿಸಿಕೊಂಡು ಬಂದರೆ, ಕೆಲವು ಸಮುದಾಯಗಳು ಭಿಕ್ಷಾಟನೆಯನ್ನು ತಮ್ಮ ಮೂಲ ವೃತ್ತಿಯನ್ನಾಗಿಸಿ ಕೊಂಡಿದ್ದಾರೆ. ಗುಜ್ಜಾರರು, ಕಾಶ್ಮೀರದ ಕುರುಬರು, ಕರ್ನಾಟಕದ ಅಲೆಮಾರಿ ಕುರುಬರು, ಕಾಡುಗೊಲ್ಲರು, ಹಿಮಾಚಲ ಪ್ರದೇಶದ ಗಡ್ಡಿ ಜನರು, ಬಕ್ಕವಾಲ ಮತ್ತು ಚಂಗ್‌ವಾ ಜನರು ಪಶುಪಾಲನೆಯ ಅಲೆಮಾರಿಗಳಾಗಿದ್ದಾರೆ. ಬಿಹಾರದ ರಬಾರಿ ಸಮುದಾಯದವರು ಸಹ ಪಶುಪಾಲನೆಯ ಅಲೆಮಾರಿ ಸಮುದಾಯದವರಾಗಿದ್ದಾರೆ. ಕೆಲವು ಸಮುದಾಯಗಳು ಬೇಟೆಯಾಧಾರಿತ ಅಲೆಮಾರಿ ಸಮುದಾಯಗಳಾಗಿದ್ದಾರೆ. ಕೆಲವು ಅಲೆಮಾರಿ ಸಮುದಾಯಗಳು, ಕೂಲಿಕಾರ್ಮಿಕರಾಗಿ, ಕೃಷಿಕಾರ್ಮಿಕರಾಗಿ ಮತ್ತು ಇತರೆ ಸಣ್ಣಪುಟ್ಟ ಕೆಲಸಗಳಲ್ಲಿ ನಿರತರಾಗಿದ್ದಾರೆ.

**ಅಲೆಮಾರಿ ಸಮುದಾಯಗಳು ಮತ್ತು ಸಾಮಾಜಿಕ ಹೊರತಳ್ಳುವಿಕೆ**

**೧. ಸಾಮಾಜಿಕ ಸ್ಥಿತಿಗತಿ**

ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳು, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಅತ್ಯಂತ ಹೊರತಳ್ಳಲ್ಪಟ್ಟ ಗುಂಪುಗಳಾಗಿವೆ. ಇವರಲ್ಲಿ ಶಿಕ್ಷಣವಂತರು ಇಲ್ಲವೇ ಇಲ್ಲ. ಇವರ ಸಾಕ್ಷರತೆ ಪ್ರಮಾಣ ಶೇಕಡ ಒಂದಕ್ಕಿಂತ ಕಡಿಮೆ. ಇವರು ಶಾಲೆಯ ಮೆಟ್ಟಿಲನ್ನೇ ತುಳಿದಿಲ್ಲ. ಕಾರಣವೇನೆಂದರೆ ಇವರು ಹೆಸರೇ ಸೂಚಿಸುವಂತೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಮಾರಿಗಳಾಗಿ ಸ್ಥಳಾಂತರ ಮಾಡುವುದರಿಂದ ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಉನ್ನತ ಶಿಕ್ಷಣವಂತೂ ಕನಸಿನ ಮಾತೇ. ಇವರಲ್ಲಿ ಒಬ್ಬ ಪದವೀಧರರಿಲ್ಲದಿರುವುದು ಇವರು ಶಿಕ್ಷಣದಲ್ಲಿ ಹಿಂದುಳಿದಿರುವುದಕ್ಕೆ ಕಾರಣವಾಗಿದೆ. ಉನ್ನತ ಶಿಕ್ಷಣ, ವಿಶ್ವವಿದ್ಯಾನಿಲಯಗಳ ಸಂಖ್ಯೆಯಲ್ಲಿ ಹೆಚ್ಚಳ, ವಿದೇಶಿ ವಿಶ್ವವಿದ್ಯಾನಿಲಯಗಳು, ಜಾಗತೀಕರಣದ ಪರಿಣಾಮಗಳೇ ಆಗಿವೆ. ಆದರೂ ಅಲೆಮಾರಿಗಳು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದವರಾಗಿದ್ದಾರೆ.

ಬಹುತೇಕ ಅಲೆಮಾರಿ ಸಮುದಾಯಗಳನ್ನು ಇಂದು ಕಳಂಕಿತ ಮತ್ತು ಅನುಮಾನದಿಂದ ನೋಡುವ ಸ್ಥಿತಿ ನಿರ್ಮಾಣವಾಗಿದೆ. ವಿಮುಕ್ತ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳನ್ನು ಅಪರಾಧಿ ಸಮುದಾಯಗಳೆಂದು ಜನರು ಮತ್ತು ಪೊಲೀಸಿನವರು ಅನುಮಾನ ಪಡುವ ಸ್ಥಿತಿಯನ್ನು ನೋಡಬಹುದಾಗಿದೆ.

**೨. ಅರ್ಥಿಕ ಸ್ಥಿತಿಗತಿಗಳು**

ಅಲೆಮಾರಿ ಸಮುದಾಯಗಳು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಕಿತ್ತು ತಿನ್ನುವ ಬಡತನ, ಒಂದೊತ್ತಿಗೂ ಊಟವಿಲ್ಲದ ಸ್ಥಿತಿ ಈ ಅಲೆಮಾರಿ ಸಮುದಾಯಗಳದ್ದಾಗಿದೆ. ಇವರು ವಲಸೆ ಹೋದೆಡೆಯಲ್ಲೆಲ್ಲಾ ಸಿಗುವ ಅಲ್ಪಸ್ವಲ್ಪ ಊಟ ಮತ್ತು ಆಹಾರ ಪದಾರ್ಥದಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಕೆಲವರು ಪಶುಪಾಲಕ ವೃತ್ತಿಯವರೂ, ಕೆಲವರೂ ಯಾವುದೇ ಆರ್ಥಿಕ ಆದಾಯವಿಲ್ಲದೇ ತುಂಬಾ ಬಡತನದಿಂದ ನರಳುತ್ತಿದ್ದಾರೆ. ಇವರಲ್ಲಿ ಭೂಮಿ ಇರುವವರು ಇಲ್ಲ. ಇಂದು ಭೂಮಿಯ ಒಂದು ಸ್ವತ್ತು ಆಗಿರುವ ಸಂದರ್ಭದಲ್ಲಿ ಅಲೆಮಾರಿ ಸಮುದಾಯಗಳಿಗೆ ಭೂಮಿಯನ್ನು ಹೊಂದುವ ಭಾಗ್ಯವೇ ಇಲ್ಲದಂತಾಗಿದೆ.

ಜಾಗತೀಕರಣದಿಂದ ಬದಲಾದ ಆರ್ಥಿಕ ವ್ಯವಸ್ಥೆಯಲ್ಲಲಿ ತಮ್ಮ ಜೀವನಕ್ಕೆ ಮೂಲನೆಲೆಯಾದ ಸಾಂಪ್ರದಾಯಿಕ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದಾರೆ. ಕಾಡಿನಲ್ಲಿ ಸಣ್ಣಪುಟ್ಟ ಆಹಾರ ಸಂಗ್ರಹಣೆ ಮಾಡುತ್ತಿದ್ದ, ಜೊತೆಗೆ ಕಾಡಿನಲ್ಲಿ ತಮ್ಮ ಪ್ರಾಣಿಗಳನ್ನು ಮೇಯಿಸಲು ಹೋಗುತ್ತಿದ್ದ ಈ ಸಮುದಾಯಗಳು ಇಂದು ಅವುಗಳನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ, ವನ್ಯ ಮೃಗಗಳ ಸಂರಕ್ಷಣಾ ಕಾನೂನು, ಪರಿಸರ ಮತ್ತು ಪ್ರಾಣಿಗಳಿಗೆ ತೊಂದರೆ ಕೊಡುವುದನ್ನು ತಡೆಗಟ್ಟುವಿಕೆಯ ಕಾನೂನು (Wild Lifre Protection Acts, Prevention of Cruelty to Animals and Environment Protection Act) ಇವುಗಳ ಅನುಷ್ಠಾನದಿಂದಾಗಿ ಲಕ್ಷಗಟಟಲೆ ಹಾವು ಹಿಡಿಯುವವರು, ಕೋತಿ ಆಡಿಸುವವರು, ಹಕ್ಕಿ ಹಿಡಿಯುವವರು (ಹಕ್ಕಿಪಿಕ್ಕಿ) ಜಾನಪದ ವೈದ್ಯ ವೃತ್ತಿಯಲ್ಲಿ ತೊಡಗಿರುವವರು, ಕುರಿಗಾರರು, ಪಶುಪಾಲಕರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಕಳೆದುಕೊಳ್ಳುವುದರ ಜೊತೆಗೆ, ಸರ್ಕಾರೇತರ ಸಂಸ್ಥೆಗಳಿಂದ ಮತ್ತು ಪೋಲೀಸರಿಂದ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಜೊತೆಗೆ ಸರ್ಕಾರಗಳು ಉಪಯುಕ್ತ ಪ್ರಾಣಿಗಳು ಮತ್ತು ಅನುಪಯುಕ್ತ ಪ್ರಾಣಿಗಳು ಎಂಬ ಪಟ್ಟಿಮಾಡಿದೆ. ಅವುಗಳಲ್ಲಿ ಕುರಿಗಳು, ಮೇಕೆಗಳು ಮತ್ತು ಒಂಟೆಗಳನ್ನು ಉಪಯುಕ್ತ ಪ್ರಾಣಿಗಳ ಪಟ್ಟಿಯಿಂದ ಕೈಬಿಟ್ಟಿರುವುದರಿಂಧ ಹೆಚ್ಚಿನದಾಗಿ ಕುರಿ, ಮೇಕೆ ಮತ್ತು ಒಂಟೆಗಳನ್ನು ಸಾಕುವ ಮತ್ತು ಅದೇ ವೃತ್ತಿಯನ್ನು ಮುಂದುವರಿಸುವವರಿಗೆ ತೊಂದರೆಯಾಗುತ್ತಿದೆ.

ವಸತಿ ಸಮಸ್ಯೆ: ಜಾಗತೀಕರಣದ ಪರಿಣಾಮವಾಗಿ ಇಂದು ನಗರೀಕರಣದ ಪ್ರಕ್ರಿಯೆ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. ಅದೇ ಸಂದರ್ಭದಲ್ಲಿ ಅಲೆಮಾರಿ ಸಮುದಾಯಗಳು ನಗರಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ಬಿಡಾರ ಅಥವಾ ಟೆಂಟ್ ಕಟ್ಟಿಕೊಂಡು ಜೀವನ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಚ್ಚಿನ ಅಲೆಮಾರಿ ಸಮುದಾಯಗಳಿಗೆ ಅವರದೇ ಆದಂತಹ ಜಾಗ, ಸೈಟು, ನೆಲೆಯಿಲ್ಲದಿರುವುದು

ಕಂಡುಬರುತ್ತದೆ. ಆದ್ದರಿಂದ ಸರ್ಕಾರವು ಕನಿಷ್ಠ ಭೂಮಿಯನ್ನು ಹೊಂದುವ ಕಾನೂನನ್ನು ಜಾರಿಗೆ ತರುವುದು ಅವಶ್ಯಕವಾಗಿದೆ. ಕೇಂದ್ರ ಸರ್ಕಾರ ವಿಶೇಷ ಆರ್ಥಿಕ ವಲಯ (SEZ)ಗಳ ಮಾದರಿಯಲ್ಲಿ ಅಲೆಮಾರಿ ಸಮುದಾಯಗಳಿಗೆ ವಿಶೇಷ ಸಾಮಾಜಿಕ ಆರ್ಥಿಕ ನೆಲೆಗಳ ವಲಯಗಳನ್ನು [Special Socio-Economic Settlement Zones(SSESZ)] ಅನುಷ್ಠಾನ ಮಾಡುವ ಯೋಜನೆ ಇದೆ.

ಹೆಚ್ಚಿನ ಅಲೆಮಾರಿ ಸಮುದಾಯಗಳು ದೇಶದಲ್ಲಿ ಕರಕುಶಲ ವಸ್ತುಗಳನ್ನು ತಯಾರಿಸುವ ಕಸುಬನ್ನು ಹೊಂದಿದ್ದವು. ಜೇಡಿ ಮಣ್ಣು, ಮಣ್ಣು, ಗಾಜು, ಕಲ್ಲು, ಇದಿರು, ಮತ್ತು ಇತರೆ ಸುಲಭವಾಗಿ ದೊರೆಯುವ ಕಚ್ಚಾ ವಸ್ತುಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸಿ ತಮ್ಮದೇ ಆದ ಮಾರುಕಟ್ಟೆಯನ್ನು ಹೊಂದಿದ್ದವು. ಆದರೆ, ಜಾಗತೀಕರಣದ ಪರಿಣಾಮದಿಂದಾಗಿ ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಕಳೆದುಕೊಳ್ಳುತ್ತಿವೆ. ಇವುಗಳ ಬಹುದೊಡ್ಡ ಸಮಸ್ಯೆಯೆಂದರೆ ಕಚ್ಚಾ ವಸ್ತುಗಳು ದೊರೆಯದೇ ಇರುವುದು. ಉದಾ: ಗಣಿಗಾರಿಕೆಯ ನಿಷೇಧದಿಂದ ಇಂತಹ ಸಮುದಾಯಗಳಿಗೂ ಕೂಡ ಹೊಡೆತ ಬಿದ್ದಿದೆ.

ಬಹುತೇಕ ಅಲೆಮಾರಿ ಸಮುದಾಯಗಳು ತರಕಾರಿ, ಹಳೆಬಟ್ಟೆಗಳು ಮತ್ತು ಇತರೆ ವಸ್ತುಗಳನ್ನು ಬೀದಿ-ಬೀದಿಯಲ್ಲಿ ಮಾರಾಟಮಾಡಿ ಜೀವನ ನಡೆಸುತ್ತಿದ್ದಾರೆ. ಆದರೆ, ಇಂದು ಜಾಗತೀಕರಣದಿಂದಾಗಿ ಮೆಟ್ರೋ, ಶಾಪಿಂಗ್ ಮಹಲ್, ಮತ್ತು ಬಿಗ್ ಬಜಾರ್ ಗಳು ತಲೆಯೆತ್ತಿ ಅಲೆಮಾರಿ ಸಮುದಾಯಗಳಿಗೆ ಮಾರುಕಟ್ಟೆಯಿಲ್ಲದಂತಾಗಿದೆ. ಜೊತೆಗೆ ಬೀದಿಯಲ್ಲಿ ಮಾರಲು ಸ್ಥಳೀಯ ಸಂಸ್ಥೆಗಳು ಪರವಾನಗಿ ನೀಡುತ್ತಿಲ್ಲ. ಅಲ್ಲದೇ, ಪೊಲೀಸರ ಉಪಟಳದಿಂದಾಗಿ ಅವರ ದಿನನಿತ್ಯದ ಆಹಾರಕ್ಕೆ ತೊಂದರೆಯಾಗಿರುವುದು ಕಂಡುಬರುತ್ತದೆ.

**೩. ರಾಜಕೀಯ ಹೊರತಳ್ಳುವಿಕೆ**

ರಾಜಕೀಯವಾಗಿ ಅಲೆಮಾರಿ ಸಮುದಾಯಗಳು ಇತರೆ ಹಿಂದುಳಿದ, ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗಿಂತ ಅತ್ಯಂತ ಹಿಂದುಳಿದಿದ್ದಾರೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ದೇಶದ ಸಂಸತ್ತಿನವರೆಗೂ ಇವರಲ್ಲಿ ಯಾವೊಬ್ಬನೂ ಪ್ರತಿನಿಧಿ ಇಲ್ಲ. ಇವರಲ್ಲಿನ ರಾಜಕೀಯ ಪ್ರಾತಿನಿಧ್ಯ ಸೊನ್ನೆ ಎಂದು ಹೇಳಬಹುದು. ಜೊತೆಗೆ ಇವರಿಗೆ ಮತದಾನದ ಹಕ್ಕೂ ಸಹ ಇರುವುದಿಲ್ಲ. ಮತದಾನದ ಹಕ್ಕು ಸಿಗಬೇಕಾದರೆ ಒಂದು ಸ್ವಂತ ಸ್ಥಳವಿರಬೇಕೆನ್ನುವ ನಿಯಮವಿದೆ. ಆದರೆ ಇವರು ನೆಲೆ ಇಲ್ಲದ, ಊರು ಇಲ್ಲದ ಅಲೆಮಾರಿಗಳಾಗಿರುವುದರಿಂದ ಪ್ರಜಾಪ್ರಭುತ್ವದಂತಹ ಭಾರತೀಯ ಸಮಾಜದಲ್ಲಿ ಇವರಿಗೆ ಮತದಾನದಲ್ಲಿ ಪಾಲ್ಗೊಳ್ಳುವ ಹಕ್ಕಿಲ್ಲ. ಇನ್ನೂ ಇವರು ಚುನಾವಣೆಯಲ್ಲಿ ಸ್ಪರ್ಧಿಸುವ ಮಾತೆಲ್ಲಿ? ಆದ್ದರಿಂದ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳು ರಾಜಕೀಯದಿಂದಲೂ ಹೊರತಳ್ಳಲ್ಪಟ್ಟ ಅಂಚೀಕೃತ ಸಮುದಾಯದವರಾಗಿದ್ದಾರೆ. ಜೊತೆಗೆ ರಾಜಕೀಯ ಅರಿವು ಇವರಲ್ಲಿ ತುಂಬಾ ಕಡಿಮೆ ಅಥವಾ ಇಲ್ಲವೇ ಇಲ್ಲ ಎಂದು ಹೇಳಬಹುದು.

ಸಾಮಾಜಿಕವಾಗಿಯಂತೂ ಅಲೆಮಾರಿ ಸಮುದಾಯಗಳು ಅತ್ಯಂತ ಹೊರತಳ್ಳಲ್ಪಟ್ಟ ಗುಂಪುಗಳಾಗಿವೆ. ಭಾರತೀಯ ಸಮಾಜವು ಜಾತಿ ಆಧಾರಿತ ಸಮಾಜವಾದ್ದರಿಂದ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಸಾಮಾಜಿಕ ಅಂತಸ್ಥ (Social Status) ನ್ನು ಹೊಂದಿವೆ. ಜೊತೆಗೆ ತಮ್ಮದು ಯಾವ ಸ್ಥರ ಎಂಬ ಕನಿಷ್ಠ ಅರಿವಾದರೂ ಇದೆ ಅಥವಾ ಜಾತಿ ವ್ಯವಸ್ಥೆಯ ಏಣಿಶ್ರೇಣಿಯಲ್ಲಿ (Hierarchy) ನಾವುಗಳು ಎಲ್ಲಿ ಬರುತ್ತೇವೆ ಎಂಬ ಅರಿವಾದರೂ ಇದೆ. ಆದರೆ, ಅಲೆಮಾರಿ ಸಮುದಾಯಗಳಿಗೆ ಇವುಗಳಾವು ತಿಳಿದಿಲ್ಲ. ವಾಸ್ತವಿಕವಾಗಿ ಅಲೆಮಾರಿ ಸಮುದಾಯಗಳು ಅಸ್ಪೃಶ್ಯ ಸಮುದಾಯಗಳಲ್ಲದಿದ್ದರೂ, ಹೆಚ್ಚೇನು ಸಾಮಾಜಿಕ ಕಳಂಕ ಇಲ್ಲದಿದ್ದರೂ, ಸಮಾಜದ ದೃಷ್ಟಿಯಿಂದ ಅತ್ಯಂತ ಅಲಕ್ಷಿತ, ನಿರಾಕರಿಸಿದ, ತಾರತಮ್ಯಕ್ಕೆ ಒಳಗಾದ, ಶೋಷಣೆಗೆ ಈಡಾದ ಎಲ್ಲಾ ರೀತಿಯಿಂದಲೂ ಹೊರತಳಲ್ಲಪಟ್ಟ ಸಮುದಾಯಗಳಾಗಿವೆ.

**೪. ಐಡೆಂಟಿಟಿಯ ಸಮಸ್ಯೆ**

ಈಗಿನ ಸರ್ಕಾರದ ಪ್ರವರ್ಗಗಳಲ್ಲಿ ಕೆಲವು ಅಲೆಮಾರಿ ಸಮುದಾಯಗಳು, ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಒಳಗೊಂಡರೆ, ಕೆಲವು ಪರಿಶಿಷ್ಟ ವರ್ಗದಲ್ಲಿ ಸೇರ್ಪಡೆಗೊಂಡಿವೆ. ಕೆಲವು ಅಲೆಮಾರಿ ಸಮುದಾಯಗಳು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿವೆ. ಕೆಲವು

ಸಮುದಾಯಗಳಂತೂ ಮೇಲಿನ ಯಾವ ಪಟ್ಟಿಯಲ್ಲಿಯೂ ಕಂಡುಬರುವುದಿಲ್ಲ. ಆದ್ದರಿಂದ ಈ ಸಮುದಾಯಗಳು ಅನನ್ಯತೆಯ ಬಿಕ್ಕಟ್ಟನ್ನು (Identity Crisis) ಎದುರಿಸುತ್ತಿವೆ. ಜೊತೆಗೆ ಪ್ರಾದೇಶಿ ಭಿನ್ನತೆಯಿಂದಾಗಿ ಭಾರತದಲ್ಲಿನ ಅಲೆಮಾರಿ ಸಮುದಾಯಗಳು ಬೇರೆ ಬೇರೆ ಹೆಸರನ್ನು ಹೊಂದಿರುವುದರಿಂದ ಒಂದೇ ನಾಮಾಂಕಿತದಿಂದ ಕರೆಯುವ ಅಥವಾ ಉಪಚಾರ ಪಡೆಯುವ ಅವಕಾಶವನ್ನು ಕಳೆದುಕೊಂಡಿವೆ. ಉದಾಹರಣೆಗೆ; ಕುರಿಗಾರರು ದೇಶದಾದ್ಯಂತ ಕಂಡುಬರುತ್ತಾರೆ. ಕಾಶ್ಮೀರದಲ್ಲಿ ಇವರನ್ನು ಕುರಿಗಾರರು, ಕರ್ನಾಟಕದಲ್ಲಿ ಅಲೆಮಾರಿ ಕುರುಬರು, ಆಂಧ್ರಪ್ರದೇಶದಲ್ಲಿ ಪಶುಪಾಲಕರು, ಹೀಗೆ ವಿವಿಧ ಹೆಸರುಗಳಿಂದ ಕರೆಯುವುದರಿಂದ ಅನನ್ಯತೆಯ ಬಿಕ್ಕಟ್ಟನ್ನು ಎದುರಿಸುತ್ತಿವೆ. ಕಾರಣ ಇವರಲ್ಲಿ ಗುರುತಿಸುವಿಕೆ ಇಲ್ಲದೇ ಇರುವುದು. ಜೊತೆಗೆ ಶಿಕ್ಷಣದ ಹಿಂದುಳಿದಿರುವಿಕೆ, ಎಷ್ಟೋ ಸಂದರ್ಭಗಳಲ್ಲಿ ಇವರು ತಮ್ಮ ಸಮುದಾಯದ ಜಾತಿ ಪ್ರಮಾಣಪತ್ರ (Caste Certificate) ವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭವನ್ನು ಭಾರತದಾದ್ಯಂತ ಕಾಣಬಹುದಾಗಿದೆ. ಕುಲಶಾಸ್ತ್ರೀಯ ಅಧ್ಯಯನಗಳೂ ಸಹ ಈ ಸಮುದಾಯದ ಮೇಲೆ ಹೆಚ್ಚಾಗಿ ನಡೆದಿಲ್ಲವಾದ್ದರಿಂದ, ವೈಜ್ಞಾನಿಕವಾಗಿ ಅಲೆಮಾರಿ ಸಮುದಾಯದವರ ಅಧ್ಯಯನ ಸಾಧ್ಯವಿಲ್ಲದಂತಾಗಿ, ಸಾಮಾಜಿಕವಾಗಿ ಅತ್ಯಂತ ಹೊರತಳ್ಳಲ್ಪಟ್ಟ ಸಮುದಾಯಗಳಾಗಿಯೇ ಉಳಿದಿದ್ದಾರೆ.

(4)

**ಒಳಗೊಳ್ಳುವಿಕೆಯ ಪ್ರಯತ್ನಗಳು**

ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳ ಅಭಿವೃದ್ಧಿಯ ಸಾಮಾಜಿಕ ಒಳಗೊಳ್ಳುವಿಕೆ(Social Inclusion) ಯ ಪ್ರಕ್ರಿಯೆಗೆ ಹಿಂದಿನ ದಿನಗಳಲ್ಲಿ ಯಾವುದೇ ರೀತಿಯ ಪ್ರಯತ್ನಗಳು ನಡೆದಿಲ್ಲ ಎನ್ನುವುದು ತುಂಬಾ ದುಃಖದ ಸಂಗತಿ. ಆದೆ ಇತ್ತೀಚೆಗೆ ಅಂದರೆ ಕಳೆದ ನಾಲ್ಕೈದು ವರ್ಷಗಳಿಂದೀಚೆಗೆ ಸರ್ಕಾರದ ಪ್ರಯತ್ನಗಳು ನಡೆಯುತ್ತಿವೆ. ಮೊದಲನೆಯದಾಗಿ ಕೇಂದ್ರ ಸರ್ಕಾರವು ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳ ವೈಜ್ಞಾನಿಕ ಅಧ್ಯಯನ ಮತ್ತು ಅವರ ಸಾಮಾಜಿಕ ಒಳಗೊಳ್ಳುವಿಕೆಗೆ ರಾಷ್ಟ್ರೀಯ ಆಯೋಗವನ್ನು ರಚಿಸಿದ್ದುದು ಗಮನಾರ್ಹ ಸಂಗತಿ. ಈ ಆಯೋಗವು ಅಲೆಮಾರಿ ಮತ್ತು ಅರೆ-ಅಲೆಮಾರಿ ರಾಷ್ಟ್ರೀಯ ಆಯೋಗವೆಂದೇ ಕರೆಯಲ್ಪಟ್ಟಿದೆ. ಈ ಆಯೋಗದ ಮೊದಲನೇ ಅಧ್ಯಕ್ಷರಾಗಿ ಶ್ರೀಯುತ. ಬಾಲಕೃಷ್ಣ ರೇಣುಕೆಯವರು ನೇಮಕವಾಗಿದ್ದರು. ಸದರಿ ಆಯೋಗವು ದೇಶದೆಲ್ಲಡೆ ಸಂಚರಿಸಿ, ಅಲೆಮಾರಿಗಳಿರುವ ರಾಜ್ಯಗಳಲ್ಲಿ ಅಲೆಮಾರಿಗಳನ್ನು ಗುರುತಿಸುವಿಕೆಗೆ ಚಾಲನೆ ನೀಡಿದರು. ಅಲ್ಲದೆ ಅಲೆಮಾರಿ ಸಮುದಾಯಗಳು ಸಂಘಟಿತವಾಗುವುದಕ್ಕೆ ಆಯೋಗವು ಒತ್ತುಕೊಟ್ಟಿತ್ತು. ದೇಶದಲ್ಲೆಡೆ ಮೊಟ್ಟ ಮೊದಲ ಬಾರಿಗೆ ಅಲೆಮಾರಿ ಸಮುದಾಯಗಳು ಒಕ್ಕೂಟ ರಚಿಸಿಕೊಂಡವು.

ಅಲೆಮಾರಿ ಮತ್ತು ಅರೆ-ಅಲೆಮಾರಿ ರಾಷ್ಟ್ರೀಯ ಆಯೋಗವು ವಿಸ್ತೃತ ಅಧ್ಯಯನ ನಡೆಸಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸರ್ಕಾರವು ವರದಿಯ ಅನುಷ್ಠಾನಕ್ಕೋಸ್ಕರ ಸಂಸತ್ ಸದಸ್ಯರ ಒಂದು ಉಪಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸದರಿ ವರದಿಯನುಸಾರವಾಗಿ ಕೇಂದ್ರ ಸರ್ಕಾರವು ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯವನ್ನು ಕೊಡಲು ಮತ್ತು ಅವರನ್ನು ಸಾಮಾಜಿಕ ಒಳಗೊಳ್ಳುವಿಕೆಗೆ ಸೇರಿಸಲು ಸಂವಿಧಾನಕ್ಕೆ ತಿದ್ದುಪಡಿ ತಂದು ಮೂರನೇ ಪರಿಚ್ಛೇದವನ್ನು ಸೃಷ್ಟಿಸಿ, ಅಲೆಮಾರಿ ಮತ್ತು ಅರೆ-ಅಲೆಮಾರಿಗಳ ಹೊಸ ಪಟ್ಟಿಯನ್ನು ಮಾಡಲು ತಯಾರಿ ನಡೆಸಿದೆ. ಈ ಮೂಲಕ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ದೊರೆತಂತಾಗಿ ಇವರು ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆಗೆ ಒಳಗಾಗಬಹುದು.

ಕರ್ನಾಟಕದಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳ ಸಾಮಾಜಿಕ ಒಳಗೊಳ್ಳುವಿಕೆಯ ಪ್ರಕ್ರಿಯೆಯನ್ನು ನೋಡಬಹುದು. ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ನಾಲ್ಕು ವರ್ಷಗಳ ಹಿಂದೆ ಎಲ್ಲಾ ಅಲೆಮಾರಿ ಸಮುದಾಯಗಳು ತಮ್ಮದೇ ಆದ ಒಕ್ಕೂಟವನ್ನು ರಚಿಸಿಕೊಂಡವು. ಆ ಮೂಲಕ ಸಂಘಟಿತರಾಗಿ ಒಂದೆಡೆ ಸೇರಿ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸತೊಡಗಿದವು. ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ಪ್ರತ್ಯೇಕ ಉಪಚಾರ ಮತ್ತು ಮೀಸಲಾತಿಗೆ ಒತ್ತಾಯಿಸಿದವು. ಪರಿಣಾಮವಾಗಿ ರಾಜ್ಯ ಸರ್ಕಾರ ವಿಶೇಷ ಅನುದಾನವನ್ನು

ಅಲೆಮಾರಿ ಸಮುದಾಯಗಳಿಗೋಸ್ಕರ ಮೀಸಲಿಟ್ಟಿತ್ತು. ಈ ವಿಶೇಷ ಅನುದಾನದಲ್ಲಿ ಅಲೆಮಾರಿ ಮತ್ತು ಅರೆ-ಅಲೆಮಾರಿ ಸಮುದಾಯಗಳಿಗೆ ಪ್ರಥಮವಾಗಿ, ಮನೆ, ಜಾಗ, ಹೊಂದಲು ಅವಕಾಶ ಮಾಡಿಕೊಡಲಾಯಿತು. ಏಕೆಂದರೆ ಅಲೆಮಾರಿ ಸಮುದಾಯಗಳಲ್ಲಿ ನೂರಕ್ಕೆ ನೂರರಷ್ಟು ತಮ್ಮದೇ ಆದ ಜಾಗ, ಮತ್ತು ಮನೆಯಿಲ್ಲದವರು. ಇದಲ್ಲದೆ ಅಲೆಮಾರಿ ಸಮುದಾಯಗಳು ಹೆಚ್ಚಿರುವ ಪ್ರದೇಶಗಳಲ್ಲಿ ಗ್ರಂಥಾಲಯ ಸ್ಥಾಪನೆ, ಭೂಮಿ ಇಲ್ಲದವರಿಗೆ ೨ ಎಕರೆ ಭೂಮಿ ಮತ್ತು ಅದಕ್ಕೆ ತೋಟಗಾರಿಕೆ ಮಾಡಲು ಹಣಕಾಸಿನ ನೆರವನ್ನು ಒದಗಿಸಲಾಯಿತು. ಇವುಗಳನ್ನು ಅನುಷ್ಠಾನ ಮಾಡಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ರಚಿಸಿ, ಸದರಿ ಸದರಿ ಸಮಿತಿಗೆ ಕ್ರಮವಾಗಿ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು ಅಧ್ಯಕ್ಷರಾಗಿರುತ್ತಾರೆ. ಜೊತೆಗೆ ಪ್ರತಿಯೊಂದು ಸಮಿತಿಯಲ್ಲಿ ಅಲೆಮಾರಿ ಸಮುದಾಯದ ಜನರು ಸದಸ್ಯರಾಗಿರುತ್ತಾರೆ. ಇದರ ಅತ್ಯಂತ ಪ್ರಮುಖ ಉದ್ದೇಶ ವಸತಿಹೀನರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುವುದಾಗಿರುತ್ತದೆ. ಇದಲ್ಲದೆ ಇನ್ನೂ ಹಲವಾರು ಯೋಜನೆಗಳನ್ನು ಸದರಿ ವಿಶೇಷ ಅನುದಾನದಲ್ಲಿ ಸೇರಿಸಲಾಗಿದೆ. ಆದಾಗ್ಯೂ ಇವೆಲ್ಲ ಯೋಜನೆಗಳು ನಿಜವಾದ ಅಲೆಮಾರಿ ಸಮುದಾಯಗಳಿಗೆ ತಲುಪಲು ನಿಜವಾದ ಬದ್ಧತೆ ಬೇಕಾಗುತ್ತದೆ. ಇದು ಒಂದು ಪ್ರಕ್ರಿಯೆಯಾಗಿರುವುದರಿಂದ, ಅಲೆಮಾರಿ ಸಮುದಾಯಗಳು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಒಳಗೊಳ್ಳುವಂತಾಗಲು ತುಂಬಾ ಸಮಯ ಬೇಕಾಗುತ್ತದೆ ಎಂದು ಹೇಳಬಹುದು.

**ಸಾಮಾಜಿಕ ಹೊರತಳ್ಳುವಿಕೆ ಮತ್ತು ಮಹಿಳೆಯರು**

ಮಹಿಳೆಯರು ಭಾರತೀಯ ಸಮಾಜದ ಒಂದು ಮುಖ್ಯವಾದ ಸಾಮಾಜಿಕ ಗುಂಪಾಗಿದ್ದು, ಇವರು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪಾಗಿದ್ದಾರೆ. ಇವರ ಜನಸಂಖ್ಯೆಯು ಹೆಚ್ಚು ಕಡಿಮೆ ಪುರುಷರಷ್ಟಿದ್ದು, ಅಂದರೆ, ಶೇಕಡ ೫೦ರಷ್ಟಿದ್ದಾರೆ. ೨೦೦೧ರ ಜನಗಣತಿಯ ಪ್ರಕಾರ ಇಂಡಿಯಾದಲ್ಲಿ ೧೦೦೦ ಪುರುಷರಿಗೆ ೯೩೩ ರಷ್ಟು ಮಹಿಳೆಯರಿದ್ದಾರೆ. ಅಂದರೆ, ಇವರ ಲಿಂಗಾನುಪಾತ ೧೦೦೦ ಪುರುಷರಿಗೆ ೯೩೩ಷ್ಟು ಮಹಿಳೆಯರು.

ಮಹಿಳೆಯರು ಭಾರತೀಯ ಸಮಾಜದಲ್ಲಿ ಅವಕಾಶ ವಂಚಿತವಾದ ಗುಂಪಾದ್ದರಿಂದ ಮತ್ತು ಲಿಂಗ ತಾರತಮ್ಯಕ್ಕೆ ಒಳಗಾದ್ದರಿಂದ ಇವರು ಸಹ ಒಂದು ಹಿಂದುಳಿದ ಗುಂಪಾಗಿದ್ದಾರೆ. ಈ ರೀತಿಯ ಹಿಂದುಳಿದ ಗುಂಪಾಗಿರುವುದರಿಂದಲೇ ಇವರೂ ಸಹ ಅಂಚೀಕೃತ ಗುಂಪಾಗಿ ಮಾರ್ಪಾಟಾಗಿದ್ದಾರೆ. ಭಾರತೀಯ ಮಹಿಳೆಯರು ಸಾಮಾಜಿಕ ಹೊರತಳ್ಳುವಿಕೆಯ ಪ್ರಕ್ರಿಯೆಗೆ ಒಳಗಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇದಕ್ಕೆ ಪುರುಷ ಸಮಾಜ ಕಾರಣವಾಗಿದ್ದರೂ, ಒಟ್ಟಾರೆ ಸಮಾಜದ ಸ್ವರೂಪ ಮತ್ತು ಸಂಸ್ಕೃತಿ ಕಾರಣೀಭೂತ ಅಂಶಗಳಾಗಿವೆ. ಭಾರತೀಯ ಮಹಿಳೆಯರು ತನ್ನದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ್ದಾರೆ. ಪುರುಷ ಮತ್ತು ಮಹಿಳೆ ಎಂಬ ಲಿಂಗ ಭೇದದಿಂದ ಸಹಜವಾಗಿ ಇವರು ಬೇರೆಯಾಗಿದ್ದರೂ, ಸಾಮಾಜೀಕರಣದಿಂದಾಗಿ ಈ ಎರಡೂ ಗುಂಪುಗಳು ಸಮನಾಗಿ ಬೆಳೆಯದೆ ಅಸಮಾನ ಗುಂಪುಗಳಾಗಿ ಬೆಳೆದವು.

ಪ್ರಾಚೀನ ಕಾಲದಿಂದಲೂ ಲಿಂಗ ತಾರತಮ್ಯ ಪ್ರಪಂಚದಾದ್ಯಂತ ಕಂಡುಬಂದರೂ, ಭಾರತೀಯ ಸಮಾಜದಲ್ಲಿ ಅತ್ಯಂತ ತೀವ್ರ ಸ್ವರೂಪ ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ. ಸಮಾಜದ ಆರಂಭದಿಂದಲೂ ಅಂದರೆ ಬೇಟೆಯಾಡುವ ಹಂತದಿಂದಲೂ, ಕೃಷಿ ಪ್ರಧಾನ ಸಮಾಜದಲ್ಲಿಯೂ ಶ್ರಮವಿಭಜನೆಯ ಲಿಂಗತ್ವದ ಮೇಲೆಯೇ ಆಗಿರುವುದನ್ನು ಇತಿಹಾಸ ಹೇಳುತ್ತದೆ. ಅಂದರೆ ಮಹಿಳೆಯು ಶಕ್ತಿವಂತಳಲ್ಲ ಎಂಬ ಕಲ್ಪನೆಯು ಆ ಸಮಾಜಗಳಲ್ಲಿ ಬಲವಾಗಿ ಬೇರೂರಿದ್ದನ್ನು ನೋಡಬಹುದು. ಪರಿಣಾಮವಾಗಿ ಮಹಿಳೆಯ ಕೆಲಸವನ್ನು ಉತ್ಪಾದಕ ಕೆಲಸವಲ್ಲ ಎಂದು ಪರಿಗಣಿಸಿ ಕೇವಲ ಅವಳ ಪಾತ್ರವನ್ನು ಅಡುಗೆ ಮನೆಗೆ ಸೀಮಿತಗೊಳಿಸಲಾಯಿತು. ಅಲ್ಲಿಂದ ಪ್ರಾರಂಭವಾದ ಅಸಮಾನತೆ, ತಾರತಮ್ಯ, ಶೋಷಣೆ ವಂಚಿತತೆ ಮತ್ತು ಹಿಂದುಳಿದಿರುವಿಕೆಗಳೂ ಇಂದೂ ಮುಂದುವರಿದಿವೆ (ಗುರುಲಿಂಗಯ್ಯ. ಎಂ.).

ಭಾರತೀಯ ಮಹಿಳೆಯು ಹೆಚ್ಚು ಕಡಿಮೆ ಎಲ್ಲಾ ರಂಗದಲ್ಲಿಯೂ ಹೊರತಳ್ಳಲ್ಪಟ್ಟ ಮಹಿಳೆಯಾಗಿರುವುದನ್ನು ಇತಿಹಾಸ ಹೇಳುತ್ತದೆ..ಇದಕ್ಕೆ ಮುಖ್ಯ ಕಾರಣ ಪುರುಷ ಪ್ರಧಾನ ವ್ಯವಸ್ಥೆ ಎಂದು ಹೇಳಬಹುದು. ಹಿಂದಿನಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪುರುಷರು ಪ್ರಾಬಲ್ಯ ಸಾಧಿಸಿ ಎಲ್ಲಾ ಅವಕಾಶಗಳನ್ನು ಪಡೆದುಕೊಂಡುದರಿಂದಲೇ ಇಂದು ಈ ಎರಡು ಗುಂಪುಗಳಲ್ಲಿ

ಅಸಮಾನತೆಯ ಜ್ವಾಲೆ ಕಂಡುಬರುತ್ತಿದೆ. ಶಿಕ್ಷಣದ ಅವಕಾಶಗಳಲ್ಲಿ ಮಹಿಳೆಯು ಪುರುಷರಿಗಿಂತ ಕಡಿಮೆ ಅವಕಾಶಗಳನ್ನು ಪಡೆದಿದ್ದಾಳೆ. ಅಲ್ಲದೆ ಸಾಕ್ಷರತೆಯಲ್ಲಿ ಮಹಿಳೆಯರಲ್ಲಿ ಹೆಚ್ಚಿನ ಹಿಂದುಳಿದಿರುವಿಕೆಯಿದೆ. ಕೇರಳ ರಾಜ್ಯ (ಮಹಿಳೆಯರ ಸಾಕ್ಷರತೆ ಶೇಕಡ ೧೦೦ ಮತ್ತು ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪ್ರಮಾಣ ಶೇಕಡ ೫೨) ಎರಡನೆಯದಾಗಿ ಪಂಜಾಬ್ ಈ ಎರಡು ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತೆ ದೇಶದ ಸರಾಸರಿ ಸಾಕ್ಷರತೆಯಷ್ಟಿದೆ. ಆದರೆ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಪುರುಷರಿಗಿಂತ ಕಡಿಮೆ ಇದೆ ಎನ್ನಬಹುದು. ಈ ರೀತಿಯ ಶಿಕ್ಷಣದ ಅಸಮಾನತೆ ಕೇವಲ ಸಾಕ್ಷರತೆಗೆ ಸೀಮಿತವಾಗಿರದೇ ವಿವಿಧ ರೀತಿಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇವರ ಪ್ರವೇಶಾವಕಾಶ ಪುರುಷರಿಗಿಂತ ಕಡಿಮೆ ಎಂದೇ ಹೇಳಬೇಕು. ಅದೇ ರೀತಿ ಭಾರತೀಯ ಮಹಿಳೆಯರಲ್ಲಿ ಪುರುಷರಿಗೆ ಅನುತ್ತೀರ್ಣತೆ ಮತ್ತು ಅಪಮೌಲ್ಯ ಹೆಚ್ಚೆಂದೇ ಹೇಳಬೇಕು. ಇದಕ್ಕೆ ಕಾರಣಗಳೆಂದರೆ ಬಡತನ, ತಂದೆ-ತಾಯಿಯರ ವಿದ್ಯಾಭ್ಯಾಸಮಟ್ಟ, ಅವರ ಕಡಿಮೆ ತಿಳುವಳಿಕೆ, ಪೂರ್ವಾಗ್ರಹ ಅರಿವು, ಸಂಪ್ರದಾಯ, ಸಾಮಾಜಿಕ ನಿಯಮಗಳು ಇತ್ಯಾದಿ.

ಶಿಕ್ಷಣದ ಅಸಮಾನತೆಗಳು ಇಂದು ನಿನ್ನೆಯದಲ್ಲ, ಹಿಂದಿನಿಂದಲೂ ಅಂದರೆ ವೇದಗಳ ಕಾಲದಿಂದಲೂ ಮಹಿಳೆಯರು ಶಿಕ್ಷಣ ವಂಚಿತರಾಗಿಯೇ ಬಂದಿದ್ದಾರೆ. ಬೌದ್ಧರ ಕಾಲದಲ್ಲಿ ಮಹಿಳಾ ಶಿಕ್ಷಣಕ್ಕೆ ಸ್ವಲ್ಪ ಮಟ್ಟಿನ ಪ್ರೋತ್ಸಾಹ ಸಿಕ್ಕಿತ್ತಾದರೂ, ಮೊಗಲರ ಕಾಲಕ್ಕೆ ಇದು ಇಲ್ಲದಂತಾಯಿತು. ಇನ್ನೂ ಬ್ರಿಟಿಷರು ಜಾರಿಗೆ ತಂದ ಔಪಚಾರಿಕ ಶಿಕ್ಷಣವೂ ಪ್ರಾರಂಭವಾದರೂ ಅದರ ಪ್ರಯೋಜನ ಮಹಿಳೆಯರಿಗೆ ಸಿಗಲಿಲ್ಲವಾಗಿ ಅಲ್ಲಿಯೂ ಮಹಿಳೆಯು ಶೈಕ್ಷಣಿಕವಾಗಿ ಹೊತಳ್ಳಲ್ಪಟ್ಟ ಸಂದರ್ಭವನ್ನು ಎದುರಿಸಬೇಕಾಗಿ ಬಂತು. ಸ್ವತಂತ್ರ ಭಾರತದಲ್ಲಿ ಜಾತ್ಯಾತೀತ, ಔಪಚಾರಿಕ, ಶಿಕ್ಷಣ ಪದ್ಧತಿ ಜಾರಿಗೆ ಬಂದರೂ ಪ್ರಾರಂಭಿಕ ಹಂತದಿಂದಲೂ ಮಹಿಳಾ ಶಿಕ್ಷಣಕ್ಕೆ ಒತ್ತು ಕೊಡಲಿಲ್ಲ. ಆದರೆ, ಇತ್ತೀಚೆಗಷ್ಟೆ ಶಿಕ್ಷಣದ ಅವಕಾಶಗಳನ್ನು ಸಮಾನಾಂತರಗೊಳಿಸಲು ನಡೆದ ಪ್ರಯತ್ನಗಳಲನ್ನು ನಾವು ನೋಡಬಹುದು. ೧೯೮೬ರ ಶಿಕ್ಷಣ ನೀತಿಯಿಂದ ಇಲ್ಲಿಯ ತನಕ ಎಲ್ಲಾ ಹಂತದ ಶಿಕ್ಷಣಗಳಲ್ಲಿ ಮಹಿಳೆಯರಿಗೆ ವಿಶೇಷ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತ್ಯೇಕ ಮಹಿಳಾ ವಿಶ್ವವಿದ್ಯಾನಿಲಯಗಳು, ಮಹಿಳಾ ಅಧ್ಯಯನ ಕೇಂದ್ರಗಳು, ಮಹಿಳಾ ಕಾಲೇಜುಗಳು, ಶಾಲಾ-ಕಾಲೇಕುಗಳು ಮಹಿಳೆಯರಿಗೆಂದೇ ಪ್ರಾರಂಭವಾದರೂ ಶಿಕ್ಷಣದ ಸಮಾನತೆಯನ್ನು ಸಾಧಿಸಲಿಕ್ಕೆ ಸಾಧ್ಯವಾಗಿಲ್ಲ.

ಸಂವಿಧಾನ ಸರ್ವರಿಗೂ ಸಮಾನತೆಯನ್ನು ನೀಡಿ, ಲಿಂಗಭೇದವನ್ನು ನಿಷೇಧಿಸಿತಾದರೂ ವಾಸ್ತವ್ಯದಲ್ಲಿ ಮಹಿಳೆಯ ಶಿಕ್ಷಣ ನಾವೆಣಿಸಿದಷ್ಟು ಪ್ರಗತಿಯನ್ನು ಸಾಧಿಸಲಿಲ್ಲ. ೧೯೫೧ರಲ್ಲಿ ಶೇಕಡ ೮.೮೬ರಷ್ಟಿದ್ದ ಸಾಕ್ಷರತೆಯ ಪ್ರಮಾಣ, ೨೦೦೧ರಲ್ಲಿ ಶೇಕಡ ೫೪ರಷ್ಟಿದ್ದುದು ಈ ಸಮಾಜದಲ್ಲಿ ಶಿಕ್ಷಣ ಅವಕಾಶಗಳ ಬಳಕೆಯಲ್ಲಿ ಲಿಂಗ ತಾರತಮ್ಯ ಎಷ್ಟರಮಟ್ಟಿಗೆ ಕಾರ್ಯಪ್ರವೃತ್ತವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂಬುದಾಗಿ ಪ್ರೊ. ಆರ್. ಇಂದಿರಾ ಅಭಿಪ್ರಾಯಪಡುತ್ತಾರೆ. (ಇಂದಿರಾ. ಆರ್., ೨೦೦೨:೮೫).

ಇನ್ನು ಶೈಕ್ಷಣಿಕ ಕ್ಷೇತ್ರದಂತೆ ಆರ್ಥಿಕ ಕ್ಷೇತ್ರದಲ್ಲಿಯೂ ಮಹಿಳೆಯು ಪುರುಷರಿಗಿಂತ ಹಿಂದಿದ್ದು, ಸಾಮಾಜಿಕವಾಗಿ ಹೊರತಳ್ಳಲ್ಪಡುವಿಕೆಯ ಸಮಸ್ಯೆಗೆ ಗುರಿಯಾಗಿದ್ದಾಳೆ..ಇದಕ್ಕೆ ಹಿಂದಿನಿಂದಲೂ ಬಲವಾಗಿ ರೂಢಿಗತವಾಗಿ ಬಂದಿರುವ ಪುರುಷ ಯಜಮಾನಿಕೆ ಮತ್ತು ಮಹಿಳೆಯು ಅಬಲಳು ಎಂಬ ಕುರುಡು ನಂಬಿಕೆ. ಜೊತೆಗೆ ಸಮಾಜಶಾಸ್ತ್ರೀಯ ದೃಷ್ಟಿಯಿಂದ ನೋಡುವುದಾದರೆ ಭಾರತೀಯ ಸಮಾಜವು ಮೂಲತಃ ಪಿತೃಪ್ರಧಾನ ಸಮಾಜವಾಗಿರುವುದರಿಂದ ಇಲ್ಲಿ ಆಸ್ತಿಯು ಗಂಡು ಮಕ್ಕಳ ಮೂಲಕ ವರ್ಗಾವಣೆಯಾಗುತ್ತಿರುವುದರಿಂಧ ಪಿತ್ರಾರ್ಜಿತ ಆಸ್ತಿಗೆ ಗಂಡು ಮಕ್ಕಳೇ ಒಡೆಯರಾಗುತ್ತಾರೆ. ಹೆಣ್ಣು ಮಕ್ಕಳಿಗೆ ಇದುವರೆಗೆ ಆಸ್ತಿಯ ಹಕ್ಕು ಇರಲಿಲ್ಲ. ಆದರೆ ಇತ್ತೀಚಿಗೆ ಹೆಣ್ಣು ಮಕ್ಕಳಿಗೂ ಆಸ್ತಿಯ ಹಕ್ಕು ಇರುವುದರಿಂದ ಸ್ತ್ರೀಯು ಪುರುಷರಷ್ಟೇ ಆಸ್ತಿಗೆ ಹಕ್ಕು ಬದ್ಧಳಾಗಿದ್ದರೂ, ಸಂಪ್ರದಾಯಸ್ತ ಭಾರತೀಯ ಸಮಾಜದಲ್ಲಿ ಒಡೆತನ ಇನ್ನೂ ಲಭ್ಯವಾಗಿಲ್ಲದಿರುವುದು ಅಸಮಾನತೆಯನ್ನು ಎತ್ತಿ ತೋರಿಸುತ್ತದೆ (ಗುರುಲಿಂಗಯ್ಯ. ಎಂ.,).

ಸಹಜವಾಗಿಯೇ ಆಸ್ತಿಯ ಒಡೆತನವೆಲ್ಲಾ ಪುರುಷರ ಕೈಯಲ್ಲಿರುತ್ತದೆ. ದೊಡ್ಡಗಾತ್ರ ಭೂಮಿಯ ದಾಖಲಾತಿಯೂ ಸೇರಿದಂತೆ ನಗರದಲ್ಲಿನ ಆಸ್ತಿಯ ದಾಖಲಾತಿಯ ಪತ್ರಗಳೂ ಸಹ ಪುರುಷರ ಹೆಸರಿನಲ್ಲಿರುತ್ತದೆ. ಅಂದರೆ ಮಹಿಳೆಯು ಆರ್ಥಿಕವಾಗಿ ಸ್ವಾವಲಂಬಿಯಲ್ಲ ಎಂಬುದನ್ನು ಇದು ತೋರಿಸುತ್ತದೆ. ಪುರುಷರ ಸ್ಥಿರಾಸ್ಥಿಯ ಮೇಲೆ ತಮ್ಮ ನಿಯಂತ್ರಣ ಸಾಧಿಸುವುದರಿಂದ ಅದನ್ನು ಅವರು ಪರಭಾರೆ ಮಾಡಲು ಅಥವಾ ಬೇರೆಯವರಿಗೆ ವರ್ಗಾಯಿಸಲು ಸ್ವತಂತ್ರರು. ಆದರೆ ಭಾರತದ ಮಧ್ಯಮ ವರ್ಗದ ಮಹಿಳೆಯರು ತಮ್ಮ ಹೆಸರಿನಲ್ಲಿ ಸ್ಥಿರಾಸ್ಥಿಯನ್ನು ಹೊಂದಿಲ್ಲದಿರುವುದು ಆಸ್ತಿಯ ಅಸಮಾನ ಹಂಚಿಕೆ ಮತ್ತು ಪುರುಷ ಪ್ರಾಬಲ್ಯತೆಯನ್ನು ತೋರಿಸುತ್ತದೆ.

ಇನ್ನು ವ್ಯಾಪಾರಿ ಕ್ಷೇತ್ರದಲ್ಲಿ ಮಹಿಳೆಯ ಪಾಲು ಇಲ್ಲವೆಂದೇ ಹೇಳಬೇಕು. ಸಂಪ್ರದಾಯಸ್ಥ ಭಾರತೀಯ ಸಮಾಜದಲ್ಲಿ ಮಹಿಳೆಯು ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾಳೆ ಎಂದರೆ ಅದು ಕಳಂಕದಿಂದ ನೋಡುವ ದೃಷ್ಟಿಕೋನವಿದೆ. ಅಂದರೆ ವ್ಯಾಪಾರ ಮಾಡುವ ಶಕ್ತಿ ಮತ್ತು ಸ್ವಾತಂತ್ರ್ಯ ಪುರುಷರಿಗೆ ಮಾತ್ರ ಎಂಬ ನಂಬಿಕೆಯಿರುವುದನ್ನು ಕಾಣಬಹುದಾಗಿದೆ. ಇದರಿಂದ ಮಹಿಳೆಯ ಆರ್ಥಿಕ ಸಂಚಲನೆ ಸಾಧ್ಯವಾಗಿಲ್ಲ. ಭಾರತೀಯ ಸಮಾಜದಲ್ಲಿ ಜಾತಿ ಆಧಾರಿತ ಕಸುಬುಗಳ ಪ್ರಾಬಲ್ಯತೆ ಮತ್ತು ಪ್ರಾಮುಖ್ಯತೆಯನ್ನು ನಾವು ಸಾಂಪ್ರದಾಯಿಕ ಸಮಾಜದಲ್ಲಿ ಕಂಡಿದ್ದೇವೆ. ಕಾಲ ಬದಲಾದಂತೆಲ್ಲಾ ಹೊಸ ಹೊಸ ಅಸಾಂಪ್ರದಾಯಿಕ ಮತ್ತು ಆಧುನಿಕ ಹುದ್ದೆಗಳು ಸೃಷ್ಟಿಯಾದವು. ಸಮಾಜದಲ್ಲುಂಟಾದ ಈ ಬದಲಾವಣೆಯಿಂದಾಗಿ ಸಾಂಪ್ರದಾಯಿಕ ಕಸುಬನ್ನು ಅವಲಂಬಿಸಿದ್ದ ಸಮುದಾಯಗಳು ನಿಧಾನವಾಗಿ ತಮ್ಮ ಕುಲ ಕಸುಬುಗಳನ್ನು ಬಿಡುತ್ತಾ ಹೊಸ ಹೊಸ ಉದ್ಯೋಗಗಳನ್ನು ಆಯ್ಕೆ ಮಾಡಿಕೊಳ್ಳಲು ಪ್ರಾರಂಭಿಸಿದರು. ಉನ್ನತ ಸ್ಥರದಲ್ಲಿ ಇದು ಹೆಚ್ಚಿನ ಸಾಮಾಜಿಕ ಚಲನೆಯನ್ನುಂಟು ಮಾಡಿದರೆ ಕೆಳಸ್ಥರದಲ್ಲಿನ ಜನರಲ್ಲಿ ಕಡಿಮೆ ಸಂಚಲನೆಯನ್ನುಂಟು ಮಾಡಿತು. ಇಷ್ಟೆಲ್ಲಾ ಬದಲಾವಣೆಗಳು ಸಂಭವಿಸಿದರೂ, ಮಹಿಳೆಯರಿಗೆ ಇದು ವರದಾನವಾಗಲಿಲ್ಲ. ಏಕೆಂದರೆ ಇಲ್ಲಿಯೂ ಈ ಹೊಸ ಹುದ್ದೆಗಳು ಪುರುಷರಿಗೆಂದೇ ಸೀಮಿತವಾದಂತವುಗಳು ಎಂದು ಬಿಂಬಿಸಲಾಯಿತು. ಮಹಿಳೆಯರಿಗೆ ಎಲ್ಲಾ ತೆರನಾದ ಹುದ್ದೆಗಳನ್ನು ಹೊಂದಲು ಪ್ರೋತ್ಸಾಹ ಸಿಗಲಿಲ್ಲ. ಬದಲಿಗೆ ನಿರಾಕರಿಸಲಾಯಿತು. ಪರಿಣಾಮವಾಗಿ ಉದ್ಯೋಗದ ಅವಕಾಶಗಳಲ್ಲಿಯೂ ಸಹ ಮಹಿಳೆಯರು ಅಂಚೀಕೃತ ಗುಂಪಾದರು. ಆದರೆ ಇತ್ತೀಚೆಗೆ ಮೀಸಲಾತಿಯ ಮುಖೇನ ಮಹಿಳೆಯರಿಗೆ ಉದ್ಯೋಗ ಮೀಸಲಾತಿ ಕಲ್ಪಿಸಿಸುದುದನ್ನು ನೋಡಬಹುದಾಗಿದೆ. (ಗುರುಲಿಂಗಯ್ಯ. ಎಂ., ೨೦೦೪:೬೭).

ವಿಶಾಲವಾದ ದೃಷ್ಟಿಯಲ್ಲಿ ಎಲ್ಲಾ ಮಹಿಳೆಯರೂ ಒಂದಲ್ಲಾ ಒಂದು ರೀತಿಯ ಲಿಂಗಾಧಾರಿತವಾದ ಸಮಸ್ಯೆಗಳಿಗೆ ಗುರಿಯಾಗಿರುತ್ತಾರೆ. ಆದರೆ, ಗ್ರಾಮೀಣ ಮತ್ತು ದಲಿತ ಮಹಿಳೆಯರು, ಪಟ್ಟಣಗಳಲ್ಲಿ ಅಸಂಘಟಿತ ಕಾರ್ಮಿಕರಾಗಿ ದುಡಿಯುತ್ತಿರುವ ಮಹಿಳೆಯರು ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮಹಿಳೆಯರ ಸಮಸ್ಯೆಗಳು ಅವರ ಬಡತನದ ಕಾರಣಕ್ಕಾಗಿ ಇನ್ನಷ್ಟು ಆಳವಾಗಿರುತ್ತವೆ; ತೀವ್ರವಾಗಿರುತ್ತವೆ.

ಕರ್ನಾಟಕದ ಮೂರನೇ ಎರಡು ಭಾಗದಷ್ಟು ಮಹಿಳೆಯರು ಗ್ರಾಮೀಣ ಭಾಗಗಳಲ್ಲಿದ್ದಾರೆ. ಒಂದು ಅಧ್ಯಯನದ ಪ್ರಕಾರ ಹಳ್ಳಿಗಳ ಶ್ರಮಶಕ್ತಿಯ ಶೇ.೬೫ಕ್ಕಿಂತ ಹೆಚ್ಚು ಭಾಗವನ್ನು ಮಹಿಳೆಯರೇ ಪೂರೈಸುತ್ತಿದ್ದಾರೆ. ಶೇ.೫೬ಮಂದಿ ಮಹಿಳೆಯರು ತಮ್ಮ ಮನೆಕೆಲಸದ ಜೊತೆಗೆ ಕುಟುಂಬದ ಒಡೆತನದ ಜಮೀನಿನಲ್ಲಿ ವ್ಯವಸಾಯ ಕೆಲಸದಲ್ಲೂ ಸೇರಿರುತ್ತಾರೆ. ಈ ದುಡಿಮೆಯ ಫಲವಾದ ಲಾಭಾಂಶವೆಲ್ಲ ಕುಟುಂಬದ ಗಂಡಸರ ಕೈಯಲ್ಲಿರುವುದರಿಂದ ಮಹಿಳೆಯರಿಗೆ ಯಾವ ಸ್ವಂತ ಆದಾಯವೂ ಇರುವುದಿಲ್ಲ. ಶೇಕಡ ೪೯ ಮಂದಿ ಮಹಿಳೆಯರು ಇದರೊಂದಿಗೆ ಇತರರ ಜಮೀನಿನಲ್ಲಿ ಕೂಲಿಗೂ ಹೋಗುತ್ತಾರೆ (ಈ ಪ್ರಮಾಣ ಗಂಡಸರಲ್ಲಿ ಶೇ.೩೦). ಆದರೆ, ಈ ಶ್ರಮಕ್ಕೆ ಅವರಿಗೆ ದೊರೆಯುವುದು ಗಂಡಸರಿಗೆ ಸಿಗುವುದರಲ್ಲಿ ಅರ್ಧದಷ್ಟು ಕೂಲಿ ಮಾತ್ರ. ಜೊತೆಗೆ ಕೃಷಿ ಸಂಬಂಧಿತ ಹೈನುಗಾರಿಕೆಯಂತಹ ಕೆಲಸಗಳನ್ನು ಬಿಟ್ಟರೆ, ಗ್ರಾಮೀಣ ಯುವಜನತೆಗೆ ಬೇಕಾದ ಉದ್ಯೋಗಾವಕಾಶಗಳನ್ನು ಸ್ಥಳೀಯವಾಗಿ ಒದಗಿಸಲು ಯಾವ ಸರ್ಕಾರಗಳೂ ಆಸಕ್ತಿ ತೋರಿಲ್ಲ. ಆದ್ದರಿಂದ ಹಳ್ಳಿಗಳ ಯುವತಿಯರು ದೂರದ ಊರುಗಳಿಗೆ ಹೋಗಲಾಗದೆ ನಿರುದ್ಯೋಗಿಗಳಾಗಿದ್ದಾರೆ.

ಇಂದಿಗೂ ಕರ್ನಾಟಕದ ಹಳ್ಳಿಗಳ ಬಹುಪಾಲು ಹೆಣ್ಣುಮಕ್ಕಳಿಗೆ ಜಮೀನಿನ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ. ಕಾರಣ, ಮೊದಲನೆಯದಾಗಿ ಸುಮಾರು ಶೇ.೩೦ ಮಹಿಳೆಯರ ಕುಟುಂಬಗಳಿಗೆ ಕೃಷಿ ಭೂಮಿಯೇ ಇಲ್ಲ ಅಥವಾ ಇದ್ದರೂ ಸರಾಸರಿ ೦.೦೯ ಎಕರೆಗಳಿಗಿಂತ ಕಡಿಮೆ (ಹೆಚ್ಚಾಗಿ ದಲಿತ ಕುಟುಂಬಗಳಲ್ಲಿ). ಹೀಗಾಗಿ ಒಡೆತನದ ಪ್ರಶ್ನೆಯೇ ಇಲ್ಲ. ಎರಡನೆಯದಾಗಿ, ಸರ್ಕಾರದ ಕೆಲವು ಯೋಜನೆಗಳಲ್ಲಿ (ಉಳುವವನಿಗೆ ಭೂಮಿ, ಒತ್ತುವರಿ ಸಕ್ರಮ ಇತ್ಯಾದಿ) ಜಮೀನು ವಿತರಣೆಯಾಗಿದ್ದರೆ, ಎಲ್ಲಾ ಕಡೆ ಅದನ್ನು ಕುಟುಂಬದ ಗಂಡಸರ ಹೆಸರಿಗೆ ದಾಖಲು ಮಾಡಿಸಲಾಗಿದೆಯೇ ಹೊರತು ಮಹಿಳೆಯರನ್ನು ಪರಿಗಣಿಸಿಯೇ ಇಲ್ಲ. ಮೂರನೆಯದಾಗಿ, ಕೆಲವೊಮ್ಮೆ ಕಾನೂನು ಪ್ರಕಾರ ಗಂಡನ ಮನೆಯ ಅಥವಾ ತವರು ಮನೆಯ ಆಸ್ತಿಯಲ್ಲಿ ಪಾಲು ಪಡೆಯುವ ಅಧಿಕಾರ ಇದ್ದಾಗಲೂ, ಆ ಕುರಿತಾದ ಸರಿಯಾದ ಮಾಹಿತಿ ಇಲ್ಲದೆ ಅಥವಾ ಸಾಕಷ್ಟು ಬೆಂಬಲವಿಲ್ಲದೆ ಮಹಿಳೆಯರು ಆಸ್ತಿಹಕ್ಕಿನಿಂದ ವಂಚಿತರಾಗುತ್ತಾರೆ. ಹೀಗಾಗಿ ಗ್ರಾಮೀಣ ಹೆಣ್ಣು ಮಕ್ಕಳ ಸ್ಥಿತಿ ಅತಂತ್ರವಾಗಿಯೇ ಇರುತ್ತದೆ. (ಗುರುಲಿಂಗನ್ಯ. ಎಂ., ೨೦೦೪:೬೯).

ರಾಜಕೀಯವಾಗಿಯೂ ಸಹ ಭಾರತದ ಮಹಿಳೆಯರು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಮಹಿಳೆಯರಾಗಿದ್ದಾರೆ. ಪುರುಷ ಪ್ರಧಾನ ರಾಜಕೀಯ ಅವಕಾಶಗಳಿಂದ ಪುರುಷರು ರಾಜಕೀಯದ ಎಲ್ಲಾ ಅವಕಾಶಗಳನ್ನು ತಾವೇ ಉಪಯೋಗಿಸಿಕೊಂಡು ಮಹಿಳೆಯರು ರಾಜಕೀಯ ಪ್ರವೇಶಿಸಿದಂತೆ ವ್ಯವಸ್ಥೆಯ ಕಾರ್ಯತಂತ್ರವನ್ನು ರೂಪಿಸಿಕೊಂಡಿದ್ದಾರೆ. ಈ ಕಾರ್ಯತಂತ್ರದಿಂದಾಗಿ ಹಿಂದಿನಿಂದಲೂ ಮಹಿಳೆಯರು ರಾಜಕೀಯ ಅವಕಾಶ ವಂಚಿತರಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ರಾಜಕೀಯ ಅವಕಾಶವಿಲ್ಲದೆ ಸಮುದಾಯಗಳ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎನ್ನುವ ಇವತ್ತಿನ ಸಂದರ್ಭದಲ್ಲಿ ಮಹಿಳೆಯು ಒಂದು ನಿರ್ದಿಷ್ಟ ಮಹಿಳಾ ಸಮಾಜವನ್ನು ಪ್ರತಿನಿಧಿಸುವುದರಿಂದ ಅವರಿಗೆ ರಾಜಕೀ ಅವಕಾಶವಿಲ್ಲದೆ ಅವರ ಆರ್ಥಿಕ ಪ್ರಗತಿ ಸಾಧ್ಯವಿಲ್ಲವೆಂದೇ ಹೇಳಬಹುದು. ಆದರೆ, ಇತ್ತೀಚೆಗೆ ರಾಜಕೀಯ ಮೀಸಲಾತಿಯು ಮಹಿಳೆಯನ್ನು ರಾಜಕೀಯವಾಗಿ ಹೊರತಳ್ಳುವ ಅವಕಾಶ ಮಾಡಿಕೊಟ್ಟಿರುವುದನ್ನು ನೋಡಬಹುದಾಗಿದೆ.

ಮಹಿಳಾ ರಾಜಕೀಯ ಸಬಲೀಕರಣಕ್ಕೆ ಪ್ರಯತ್ನಗಳು ನಡೆಯುತ್ತವೆಯಾದರೂ, ಇದುವರೆಗೆ ವಿಧಾನಸಭೆಗಳಲ್ಲಿ ಮತ್ತು ಸಂಸತ್ತಿನಲ್ಲಿ ಶೇಕಡ ೩೩ರಷ್ಟು ಮಹಿಳಾ ಮೀಸಲಾತಿ ನೀಡುವುದು ಸಾಧ್ಯವಾಗಿಲ್ಲ..ರಾಜಕೀಯ ಅವಕಾಶಗಳಲ್ಲಿ ಪುರುಷ ಪ್ರಧಾನ ಸಮಾಜವೇ ಪ್ರಾಬಲ್ಯವನ್ನು ಸಾಧಿಸಿದೆ ಎಂದು ಹೇಳಬಹುದು. ಆದರೆ ತಳಮಟ್ಟದಲ್ಲಿ ಅಂದರೆ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ರಾಜಕೋಯ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಇದರಿಂದಾಗಿಯೇ ಇಂದು ಗ್ರಾಮೀಣ ಸಮಾಜದಲ್ಲಿ ಮಹಿಳೆಯರು ಮೂರು ಹಂತಗಳ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಸ್ಪರ್ಧಿಸುವುದರಿಂದ ಹಿಡಿದು ಸದಸ್ಯರು, ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರುಗಳಾಗುವುದರ ಮೂಲಕ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ ಎನ್ನಬಹುದು. ಆದರೆ, ಇತ್ತೀಚೆಗೆ ಶೇಕಡ ೩೩ರಷಟು ರಾಜಕೀಯ ಮೀಸಲಾತಿಯನ್ನು ಮಹಿಳೆಯರಿಗೋಸ್ಕರ ಅನುಷ್ಠಾನಕ್ಕೆ ತರಲು ರಾಜಕೀಯ ಪಕ್ಷಗಳು ಬದ್ಧವಾಗಿರುವಂತೆ ಕಾಣುತ್ತದೆ.

ಸಾಮಾನ್ಯವಾಗಿ ಭಾರತದ ಮಹಿಳೆಯು ಅಂಚೀಕೃತ ಮಹಿಳೆಯಾಗಿದ್ದಾಳೆ. ಆದರೆ ಎಲ್ಲಾ ಮಹಿಳೆಯರು ಅಂಚಿನೀಕರಣ ಪ್ರಕ್ರಿಯೆಗೆ ಒಳಗಾಗುವುದಿಲ್ಲ ಎಂದು ಹೇಳಬಹುದಾದರೂ, ಭಾರತದ ಸಂದರ್ಭದಲ್ಲಿ ಮಹಿಳೆಯರು ಒಂದಲ್ಲ ಒಂದು ರೀತಿ ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪಿಗೆ ಸೇರಿದವರಾಗಿದ್ದಾರೆ. ಇವರು ಸಾಮಾಜಿಕ ಗುಂಪುಗಳಂತೆ ಒಂದು ಸಾಮಾಜಿಕ ವರ್ಗವನ್ನು ಪ್ರತಿನಿಧಿಸುವುದರಿಂದ ಇತರೆ ಹಿಂದುಳಿದ ಸಾಮಾಜಿಕ ಗುಂಪುಗಳಂತೆಯೇ ಹಿಂದುಳಿದಿದ್ದು ಅಂಚೀಕರಣದ ಸಮಸ್ಯೆಗೆ ಗುರಿಯಾಗಿದ್ದಾರೆ.

ಇವರ ಹೊರತಳ್ಳುವಿಕೆಯ ಸಂದರ್ಭಗಳು ಒಂದಲ್ಲ ಹಲವಾರು ರೀತಿಯದ್ದಾಗಿವೆ. ಈಗಾಗಲೇ ಹೇಳಿದ ಹಾಗೆ ಶಿಕ್ಷಣ, ಉದ್ಯೋಗ, ರಾಜಕೀಯ ಹೀಗೆ ಹಲವು ರಂಗಗಳಲ್ಲಿ ಹೊರತಳ್ಳಲ್ಪಟ್ಟಿದ್ದು, ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದಾರೆ. ಇಂದಿನ ಆಧುನಿಕ ಸಮಾಜದಲ್ಲಿಯೂ ಬಹುತೇಕ ಮಹಿಳೆಯರು ಹಲವು ರೀತಿಯ ಸಾಮಾಜಿಕ-ಶೈಕ್ಷಣಿಕ ಮತ್ತು ಆರ್ಥಿಕ ಅನರ್ಹತೆಗಳಿಂದ ನರಳುತ್ತಿದ್ದಾರೆ. ಕಾರಣವೇನೆಂದರೆ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯು ಔಪಚಾರಿಕವಾಗಿ ೨೦೦೧ರಿಂದಲೇ ಜಾರಿಗೆ ಬಂದರೂ ಇದು ಎಲ್ಲಾ ಮಹಿಳೆಯರನ್ನು ತಲುಪಿಲ್ಲ ಅಥವಾ ಈ ಕಾರ್ಯತಂತ್ರವು ಭಾರತದ ಸಂದರ್ಭದಲ್ಲಿ ಏಕರೀತಿಯಾಗಿ ಅನ್ವಯವಾಗುವುದಿಲ್ಲ. ಏಕೆಂದರೆ ಇಲ್ಲಿ ವಿವಿಧ ಸಾಮಾಜಿಕ ಗುಂಪು, ಜಾತಿ, ಜನಾಂಗ, ಸಮುದಾಯ ಧರ್ಮ, ಪ್ರಾದೇಶಿಕ ಭಿನ್ನತೆಗಳು ಮತ್ತು ಬುಡಕಟ್ಟುಗಳ ಬಹುರೂಪಿ ಸಂಸ್ಕೃತಿಯ ಭಿನ್ನತೆಯಿದ್ದು, ಅವಕಾಶಗಳು ಮತ್ತು ಸವಲತ್ತುಗಳು ಸಮಾನವಾಗಿ ಹಂಚಿಕೆಯಾಗಿಲ್ಲ. ಜೊತೆಗ ಗ್ರಾಮೀಣ ಮತ್ತು ನಗರ ಸಮಾಜಗಳೆಂಬ ಪ್ರತ್ಯೇಕ ಸಮಾಜಗಳಿವೆ.

ಮಹಿಳಾ ಚಳುವಳಿಗಾರರು ಮಹಿಳಾ ವೇದಿಕೆಗಳನ್ನು ರಚಿಸಿಕೊಂಡು, ಮಹಿಳಾ ಸಬಲೀಕರಣಕ್ಕೆ ಹೋರಾಟ ನಡೆಸುತ್ತಿದ್ದರೂ, ಬಹುತೇಕ ಸ್ತ್ರೀವಾದಿ ಅಥವಾ ಮಹಿಳಾ ಚಳುವಳಿಗಳು ಮಧ್ಯಮ ವರ್ಗದ ನಗರ ಕೇಂದ್ರಿತವಾಗಿವೆ ಎಂದರೆ ತಪ್ಪಾಗಲಾರದು. ಸರ್ಕಾರ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಆರ್ಥಿಕ ಸ್ವಾವಲಂಬನೆ ಮತ್ತು ಅರಿವು ಮೂಡಿಸುವ ಕಾರ್ಯತಂತ್ರವನ್ನು ರೂಪಿಸಿದಾಗ್ಯೂ, ಸಾಮಾಜಿಕ ಬಲಹೀನತೆಗಳಿಂದ ನರಳುತ್ತಿರುವ ಅನೇಕ ಮಹಿಳೆಯರು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಟ್ಟು, ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿರುವುದು ಸತ್ಯದ ಸಂಗತಿ. ಅದರಲ್ಲಿಯೂ, ಗ್ರಾಮೀಣ ಮತ್ತು ಬುಡಕಟ್ಟು ಮಹಿಳೆಯರ ಸ್ಥಿತಿ ಹೇಳತೀರದು. ಇವರು ಸ್ವಲ್ಪಮಟ್ಟಿಗೆ ಆರ್ಥಿಕವಾಗಿ ಸಬಲೀಕರಣಗೊಳ್ಳುತ್ತಿದ್ದರೂ, ಸಾಮಾಜಿಕವಾಗಿ ಹಲವು ಅಮಾನವೀಯ ಆಚರಣೆಗೆ ಗುರಿಯಾಗಿ ಆ ಮೂಲಕ ಸಮಾಜದ ಅಂಚಿಗೆ ದೂಡಲ್ಪಟ್ಟಿದ್ದಾರೆ.

**ಒಳಗೊಳ್ಳುವಿಕೆಯ ಪ್ರಯತ್ನಗಳು**

ಭಾರತದಲ್ಲಿ ಮಹಿಳೆಯರ ಸಬಲೀಕರಣ ಅಥವಾ ಅಭಿವೃದ್ಧಿಗಾಗಿ ಸ್ವತಂತ್ರ ಪೂರ್ವದಲ್ಲಿಯೇ ಪ್ರಯತ್ನಗಳು ನಡೆದಿದ್ದರೂ, ಆ ಪ್ರಯತ್ನಗಳಿಗೆ ಪ್ರಚಾರ ಸಿಗಲಿಲ್ಲ ಎಂದೇ ಹೇಳಬಹುದು. ಮಹಿಳೆಯರ ಉದ್ಧಾರದ ಬಗ್ಗೆ ಯಾರೂ ಚಿಂತಿಸದ ಆ ಸಮಯದಲ್ಲಿ ಪ್ರಥಮ ಬಾರಿಗೆ ಡಾ. ಬಿ.ಆರ್. ಅಂಬೇಡ್ಕರ್ವರು ಭಾರತೀಯ ಮಹಿಳೆಯರ ಉದ್ಧಾರದ ಬಗ್ಗೆ ಚಿಂತಿಸಿರುವುದನ್ನು ನೆನಪಿಸಿಕೊಳ್ಳಲೇಬೇಕು. ಮಹಿಳೆಯರ ಹಲವಾರು ಸಾಮಾಜಿಕ-ಆರ್ಥಿಕ ನ್ಯೂನತೆಗಳನ್ನು ತೊಡೆದು ಹಾಕಲು ರೂಪಿಸಿದ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಸ್ವತಂತ್ರ ನಂತರದ ದಿನಗಳಲ್ಲಿ ಮಹಿಳೆಯರ ಸಬಲೀಕರಣಕ್ಕೆಂದೇ ಹಲವಾರು ಕಾರ್ಯತಂತ್ರಗಳನ್ನು ಸರ್ಕಾರ ರೂಪಿಸಿದೆ. ಜೊತೆಗೆ ಸ್ತ್ರೀವಾದಿ ಸಂಘಟನೆಗಳು ಹೋರಾಟ ಮಾಡುತ್ತಲೇ ಬಂದಿದೆ. ಮಹಿಳೆಯರ ಹಕ್ಕುಗಳನ್ನು ರಕ್ಷಿಸಲು ಹಲವಾರು ಕಾನೂನುಗಳು ಅಸ್ತಿತ್ವಕ್ಕೆ ಬಂದಿವೆ. ಆಸ್ತಿಯ ಹಕ್ಕು, ವರದಕ್ಷಿಣೆ ವಿರೋಧಿ ಕಾನೂನು, ಲೈಂಗಿಕ ಶೋಷಣೆಯ ದೌರ್ಜನ್ಯದ ಹಕ್ಕು, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಾನೂನು, ಹಾಗೂ ರಾಜಕೀಯ ಮೀಸಲಾತಿ ಕಾನೂನು (ಸ್ಥಳೀಯ ಸಂಸ್ಥೆಗಳಲ್ಲಿ) ಹೀಗೆ ಹಲವು ಕಾನೂನುಗಳು ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸಲು ಮತ್ತು ರಕ್ಷಣೆ ಒದಗಿಸಲು ಜಾರಿಗೊಂಡಂತಹ ಕಾನೂನುಗಳು. ಜೊತೆಗೆ ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಹಲವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಸಂಘಟನೆಗಳಲ್ಲಿ ಮಹಿಳೆಯರ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ವಿಶೇಷ ಸವಲತ್ತುಗಳನ್ನು ಕೊಡುವ ಮೂಲಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲಾಗುತ್ತದೆ. ವೃತ್ತಿಪರ ಹಾಗೂ ಉನ್ನತ ಶಿಕ್ಷಣಕ್ಕೆ ಪೂರಕವಾಗುವ ಅವಕಾಶವನ್ನು ಕಲ್ಪಿಸುವ ಪ್ರಕ್ರಿಯೆಯನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡಬಹುದಾಗಿದೆ. ಉದ್ಯೋಗದ ಅವಕಾಶಗಳಲ್ಲಿ ಗಣನೀಯ ಬದಲಾವಣೆಗಳು ಗೋಚರಿಸುತ್ತಿದ್ದು, ಎಲ್ಲಾ ರೀತಿಯ ಉದ್ಯೋಗ ಅವಕಾಶಗಳು ಇಂದು ಮಹಿಳೆಯರಿಗೆ ದೊರೆಯಲಾರಂಭಿಸಿವೆ. ಸ್ತ್ರೀ ಶಕ್ತಿ ಮತ್ತು ಸ್ವಸಹಾಯ ಗುಂಪುಗಳ ನೆರವಿನಿಂದ ಗ್ರಾಮೀಣ ಮಹಿಳೆಯರು ಸಂಘಟಿತರಾಗುತ್ತಿದ್ದಾರೆ. ಆರ್ಥಿಕವಾಗಿ ಸಬಲೀಕರಣಗೊಳ್ಳುವುದರ ಜೊತೆಗೆ ಹಲವಾರು ಕೌಟುಂಬಿಕ ಸಮಸ್ಯೆಗಳಲ್ಲಿ ತಾವೇ ಬಗೆಹರಿಸಿಕೊಳ್ಳುತ್ತಿರುವುದನ್ನು ನೋಡಿದರೆ ಸ್ವಲ್ಪಮಟ್ಟಿನ ಅರಿವು ಬಂದಿದೆ ಎಂದು ಹೇಳಬಹುದು.

ಇತ್ತೀಚಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು (ಸಂಸತ್ತು ಮತ್ತು ವಿಧಾನಸಭೆ) ಸಂವಿಧಾನಕ್ಕೆ ೧೦೮ನೇ ತಿದ್ದುಪಡಿ ತರಲು ಪ್ರ ಯತ್ನಗಳು ನಡೆಯುತ್ತಿವೆ. ಹೀಗೆ ಮಹಿಳೆಯರ ಸಬಲೀಕರಣಕ್ಕಾಗಿ ಹತ್ತು ಹಲವು ಪ್ರಯತ್ನಗಳು ನಡೆದಿದ್ದರೂ ಸಹ ಇಂದಿಗೂ ಭಾರತದ ಮಹಿಳೆಯರು ಅಂಚೀಕೃತ ಮಹಿಳೆಯರಾಗಿಯೇ ಉಳಿದಿದ್ದಾರೆ. ಏಕೆಂದರೆ ಅಭಿವೃದ್ಧಿಯ ಪ್ರಯತ್ನಗಳು ಈಗಷ್ಟೆ ಪ್ರಾರಂಭವಾಗಿರುವುದರಿಂದ ಹಲವು ಶತಮಾನಗಳಿಂದ ಶೋಷಣೆಗೆ ಮತ್ತು ಅಸಮಾನತೆಗೆ ಒಳಗಾದ ಮಹಿಳೆಯರು ಒಮ್ಮೆಲೇ ಉದ್ಧಾರವಾಗುವುದಾದರೂ ಹೇಗೆ? ಇದು ಒಂದು ಪ್ರಕ್ರಿಯೆಯಾಗಿರುವುದರಿಂದ ಇನ್ನೂ ಕೆಲವಾರು ವರ್ಷಗಳು ಬೇಕಾಗುತ್ತವೆ. ಕಾರಣವೆಂದರೆ ಪುರುಷ ಪ್ರಧಾನ ಸಮಾಜದಲ್ಲಿ ಪುರುಷರ ಸಾಮಾಜೀಕರಣ ಪುರುಷ ದೃಷ್ಟಿಕೋನದಿಂದಲೇ ನಡೆದಿರುವುದರಿಂದ ಮಾನಸಿಕವಾಗಿ ಪುರುಷರು ತಯಾರುಗೊಳ್ಳಬೇಕು. ಹಾಗೆಯೇ ಮಹಿಳೆಯರಿಗೂ ಸಮಾನ ರೀತಿಯ ಅಂದರೆ ಗಂಡು ಮಕ್ಕಳಂತೆಯೇ ಸಮಾನ ರೀತಿಯ ಸಾಮಾಜೀಕರಣ ದೊರಕಬೇಕು. ಇದರಿಂದ ಹಂತ ಹಂತವಾಗಿ ಮಾನಸಿಕವಾಗಿ ಪುರುಷರು ಕೂಡ ಮಹಿಳೆಯರ ಉನ್ನತಿಗೆ ಮತ್ತು ಸಮಾನ ಅವಕಾಶಕ್ಕೆ ಸಿದ್ಧವಾಗಬೇಕು. ಆಗ ಮಾತ್ರ ಸ್ವಲ್ಪಮಟ್ಟಿನ ಅಂಚಿನೀಕರಣ ಸಂದರ್ಭವನ್ನು ತಡೆಗಟ್ಟಬಹುದು. ನಮ್ಮಲ್ಲಿ ಇನ್ನೂ ಮಹಿಳೆಯರಿಗೆ ಸಾಮಾಜಿಕ ಕಳಂಕಿತ ಸ್ಥಾನ ಇರುವಾಗ ಅಭಿವೃದ್ಧಿಯ ಮಾತು ಇನ್ನೆಲ್ಲಿ ಬಂತು? ಇದರಿಂದಾಗಿಯೇ ಇಂದು ತಳವರ್ಗದ ಮಹಿಳೆಯರು ಇತರೆ ಮಹಿಳೆಯರಿಗಿಂತ ಹೆಚ್ಚುಸಾಮಾಜಿಕವಾಗಿ ಹಿಂದುಳಿದಿರುವಿಕೆಯನ್ನು ಕಡಿಮೆ ಮಾಡಿದರೆ ಮಾತ್ರ ಸಮಾಜದ ಮುಖ್ಯವಾಹಿನಿಯಲ್ಲಿ ಮಹಿಳೆಯರು ಮಿಳಿತವಾಗಿ, ಸಾಮಾಜಿಕ ಹೊರತಳ್ಳುವಿಕೆಯನ್ನು ಮೆಟ್ಟಿನಿಂತು ಸಾಮಾಜಿಕ ಒಳಗೊಳ್ಳುವಿಕೆಗೆ ಒಳಗಾಗಬಹುದು.

# ಆಕರ ಗ್ರಂಥಗಳು


೧ ತಲಗಾವಿ, ಲಕ್ಷ್ಮಣ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨ ಇಂದಿರಾ. ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩ ಗುರುಲಿಂಗಯ್ಯ, ಎಂ., ೨೦೦೫, ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೪ ಗುರುಲಿಂಗಯ್ಯ, ಎಂ., ೨೦೦೮, ಅಂಚಿನೀಕರಣ ಮತ್ತು ಅಂಚೀಕೃತ ಗುಂಪುಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

೫ ಕಾಂತರಾಜು, ಪ್ರಜಾವಾಣಿ, ದಿನಾಂಕ:೦೬-೧೦-೧೯೯೮, ಮತ್ತುಇ ೦೮-೦೬-೧೯೯೮.

೬ ಮೂರನೇ ಹಿಂದುಳಿದ ವರ್ಗಗಳ ಆಯೋಗದ ವರದಿ, ಸಂಪುಟ ೧ ಮತ್ತು ೨, ೧೯೯೦, ಕರ್ನಾಟಕ ಸರ್ಕಾರ, ಬೆಂಗಳೂರು.

೭ Amartya Sen,2004, Social Exclusion Concept Application Scrutiny, Critical Questi, New Delhi.

8 Debal K.Singha Roy, 2001, Social Development and the Empowerment of Marginalised Groups, Sage Publications, New Delhi.

9 Gurulingaiah, M.2007, Tribal Culture, Change and Mobility, Anmol Publications Pvt.,Ltd.,New Delhi.

10 Report of the Second Backward Commission, Vols, 1,2 and 3, 1986, Government of Karnataka, Bangalore.

11 Report of the Karnataka Third Backward Classes Commission, Vols, 1 and 2, 1990, Government of Karnataka, Bangalore.